# 'ನೈರ್ಮಲ್ಯ' ರಾಜ್ಯ ಪ್ರಶಸ್ತಿ ಮಾರ್ಗಸೂಚಿ




ಸಂಪೂರ್ಣ ಸ್ವಚ್ಛತಾ ಆಂದೋಲನ

ಸ್ವಾಭಿಮಾನಕ್ಕಾಗಿ ಸ್ವಚ್ಛತೆ

## ನೈರ್ಮಲ್ಯ

ಸ್ವಚ್ಛತೆಗೆ ಸನ್ಮಾನ

ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಸ್ವಚ್ಛತೆಯ ಸಾಧನೆಗೆ ಪ್ರಶಸ್ತಿ ಗೌರವಗಳು

ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಶುಚಿತ್ವವೇ ದೈವತ್ವ ಎಂದರು. ನಮ್ಮ ಕಸವನ್ನು ನಾವೇ ತೆಗೆಯುವ ಜಾಡಮಾಲಿಗಳಾಗಬೇಕು ಎಂದ ಅವರು, ತಮ್ಮ ಶೌಚಾಲಯವನ್ನು ತಾವೇ ತೊಳೆಯುವ ಮೂಲಕ ಎಲ್ಲರಿಗೂ ಮಾದರಿಯಾದರು. ಆದರೆ ಸ್ವಾತಂತ್ರ್ಯ ಬಂದು 62 ವರ್ಷಗಳಾದರೂ ಗಾಂಧೀಜಿಯ ಕನಸಿನ ಭಾರತ ಗಲೀಜು, ಕೊಳಕುತನ, ಕೆಟ್ಟ ವಾಸನೆಯಿಂದ ನರಳುತ್ತಿದೆ. ಕಲುಷಿತ ನೀರು ಮತ್ತು ಶುಚಿತ್ವದ ಕೊರತೆಯಿಂದ ಹರಡುವ ರೋಗಗಳು ಮಕ್ಕಳು ಮತ್ತು ಮಹಿಳೆಯರನ್ನು ಬಲಿ ತೆಗೆದುಕೊಳ್ಳುತ್ತಿವೆ.

ಹಳ್ಳಿಗಳಿಗೆ ಅಂಟಿರುವ ಗಲೀಜು ಎಂಬ ಹಣೆಪಟ್ಟಿ ತೆಗೆದು ಹಾಕಲು ಕೇಂದ್ರ ಸರ್ಕಾರ ಸಂಪೂರ್ಣ ಸ್ವಚ್ಛತಾ ಆಂದೋಲನವನ್ನು ರೂಪಿಸಿದೆ. ಬಯಲು ಮಲ ವಿಸರ್ಜನೆಯನ್ನು ಸಂಪೂರ್ಣವಾಗಿ ನಿಲ್ಲಿಸುವುದು, ಕೊಳಕು ಪಂಜರದಿಂದ ಹಳ್ಳಿಗಳನ್ನು ಮುಕ್ತಗೊಳಿಸುವುದು ಹಾಗೂ ಆ ಮೂಲಕ ಜನರ ಆರೋಗ್ಯ ಮತ್ತು ಜೀವನ ಮಟ್ಟವನ್ನು ಉತ್ತಮ ಪಡಿಸುವುದು ಈ ಯೋಜನೆಯ ಆಶಯ. ಹಳ್ಳಿಗಳಲ್ಲಿ ಎಲ್ಲ ಮನೆಯವರು ಶೌಚಾಲಯವನ್ನು ನಿರ್ಮಿಸಿಕೊಂಡು ಬಳಸುವಂತೆ ಮಾಡುವುದು, ಕಸ ಮತ್ತು ಗಲೀಜು ನೀರನ್ನು ಸೂಕ್ತರೀತಿಯಲ್ಲಿ ವಿಲೇವಾರಿ ಮಾಡುವುದು, ಶಾಲೆಗಳು ಮತ್ತು ಅಂಗನವಾಡಿಗಳಲ್ಲಿ ಮಕ್ಕಳಿಗೆ ಸೂಕ್ತವಾದ ಶೌಚಾಲಯಗಳನ್ನು ಒದಗಿಸುವುದು ಹಾಗೂ ಮಕ್ಕಳು ಸೇರಿದಂತೆ ಎಲ್ಲರೂ ಸ್ವಚ್ಛತೆಯ ಅಭ್ಯಾಸಗಳನ್ನು ಜೀವನ ವಿಧಾನವಾಗಿ ಅಳವಡಿಸಿಕೊಳ್ಳುವಂತೆ ಮಾಡುವುದು ಈ ಆಂದೋಲನದ ಪ್ರಮುಖ ಚಟುವಟಿಕೆಗಳು.

2005ರಲ್ಲಿ ಆರಂಭವಾದ ಈ ಆಂದೋಲನ ರಾಜ್ಯದಲ್ಲೂ ನಡೆದಿದೆ. ಕಳೆದ 4 ವರ್ಷಗಳಲ್ಲಿ 21 ಲಕ್ಷ ಕುಟುಂಬಗಳು ಶೌಚಾಲಯ ಕಟ್ಟಿಸಿಕೊಂಡಿವೆ. ಮುಂದಿನ ಮೂರು ವರ್ಷಗಳಲ್ಲಿ ಇನ್ನೂ 35 ಲಕ್ಷ ಕುಟುಂಬಗಳು ಶೌಚಾಲಯ ಹೊಂದುವಂತೆ ಮಾಡಬೇಕಿದೆ

### ನಿರ್ಮಲ ಗ್ರಾಮ ಪುರಸ್ಕಾರ: ಕೇಂದ್ರ ಪ್ರಶಸ್ತಿ

ಸಂಪೂರ್ಣ ಸ್ವಚ್ಛತಾ ಆಂದೋಲನವು ಇಡೀ ರಾಷ್ಟ್ರದ ಎಲ್ಲ ಹಳ್ಳಿಹಳ್ಳಿಗಳಲ್ಲಿ ಅನುಷ್ಠಾನಗೊಳ್ಳುತ್ತಿರುವ ಕಾರ್ಯಕ್ರಮ. ದೇಶದ ಎಲ್ಲ ಗ್ರಾಮಗಳು ಬಯಲು ಮಲ ವಿಸರ್ಜನೆಯಂಥ ಕೆಟ್ಟ ಪದ್ಧತಿಯಿಂದ ಮುಕ್ತಗೊಂಡು ಸ್ವಚ್ಛ ಹಾಗೂ ಸುಂದರ ಗ್ರಾಮಗಳಾಗಿ ರೂಪುಗೊಳ್ಳಬೇಕೆಂಬುದೇ ಆಂದೋಲನದ ಬಹುಮುಖ್ಯ ಉದ್ದೇಶ. ಗ್ರಾಮೀಣ ಪ್ರದೇಶಗಳಲ್ಲಿ ಸ್ವಚ್ಛತೆಯನ್ನು ಸಾಧಿಸಲು, ಪಂಚಾಯತ್ ರಾಜ್ ಸಂಸ್ಥೆಗಳನ್ನು ಉತ್ತೇಜಿಸುವ ಸಲುವಾಗಿ ಕೇಂದ್ರ ಸರ್ಕಾರವು ಸಂಪೂರ್ಣ ಸ್ವಚ್ಛತೆಯನ್ನು ಸಾಧಿಸಿದ ಗ್ರಾಮ, ತಾಲೂಕು ಹಾಗೂ ಜಿಲ್ಲಾ ಪಂಚಾಯತಿಗಳಿಗೆ ನೀಡುವ ಪ್ರಶಸ್ತಿ 'ನಿರ್ಮಲ ಗ್ರಾಮ ಪುರಸ್ಕಾರ'



### ಪುರಸ್ಕಾರ ಯಾರಿಗೆ..?

ಬಯಲು ಮಲ ವಿಸರ್ಜನೆಯಿಂದ ಸಂಪೂರ್ಣವಾಗಿ ಮುಕ್ತಗೊಂಡಿರುವ, ಸ್ವಚ್ಛತೆಯ ಎಲ್ಲ ಅಭ್ಯಾಸಗಳನ್ನು ಅಳವಡಿಸಿಕೊಂಡಿರುವ ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಗಳಿಗೆ ಭಾರತದ ರಾಷ್ಟ್ರಪತಿಗಳು ನೀಡುವ ಅತ್ಯುನ್ನತ ಗೌರವ 'ನಿರ್ಮಲ ಗ್ರಾಮ ಪುರಸ್ಕಾರ'.

### ಪುರಸ್ಕಾರ ಪಡೆಯಲು ಮಾಡಬೇಕಾದ್ದು:

- ಗ್ರಾಮದಲ್ಲಿ ಬಯಲು ಮಲ ವಿಸರ್ಜನೆ ಸಂಪೂರ್ಣವಾಗಿ ನಿಲ್ಲಬೇಕು.
- ಎಲ್ಲ ಮನೆಗಳಲ್ಲೂ ಶೌಚಾಲಯಗಳಿರಬೇಕು ಹಾಗೂ ಕಡ್ಡಾಯವಾಗಿ ಬಳಸಬೇಕು.
- ಅಂಗನವಾಡಿ ಮತ್ತು ಶಾಲೆಗಳಲ್ಲೂ ಶೌಚಾಲಯಗಳು ಇರಬೇಕು. ಮಕ್ಕಳು ಮಲ–ಮೂತ್ರಗಳ ವಿಸರ್ಜನೆಗೆ ಶೌಚಾಲಯಗಳನ್ನೇ ಬಳಸಬೇಕು.
- ಬಚ್ಚಲ ನೀರು, ಅಡುಗೆ ಮನೆಯ ನೀರನ್ನು ತೋಟಕ್ಕೆ ಅಥವಾ ಇಂಗುಗುಂಡಿಗೆ ಅಥವಾ ಚರಂಡಿಗೆ ಹಾಯಿಸಬೇಕು. ಚರಂಡಿಯ ನೀರು ನಿಲ್ಲದಂತೆ ಹರಿದುಹೋಗುವ ವ್ಯವಸ್ಥೆ ಮಾಡಬೇಕು.
- ಕಸವನ್ನು ಊರ ಹೊರಗಿನ ಗುಂಡಿಗೆ ಅಥವಾ ಕಸದ ತೊಟ್ಟಿಗೆ ಹಾಕಬೇಕು. ಗ್ರಾಮದ ಕಸ ಮತ್ತು ಬಳಸಿದ ನೀರನ್ನು ಸಮರ್ಪಕವಾಗಿ ನಿರ್ವಹಿಸಬೇಕು.

### ಪುರಸ್ಕಾರದ ಮೊತ್ತ:

ಜನಸಂಖ್ಯೆಗೆ ಅನುಗುಣವಾಗಿ ಪ್ರತಿ ಗ್ರಾಮ ಪಂಚಾಯತ್‌ಗೆ 50 ಸಾವಿರದಿಂದ 5 ಲಕ್ಷ ರೂಪಾಯಿಗಳು, ಪ್ರತಿ ತಾಲೂಕು ಪಂಚಾಯಿತಿಗೆ 10ರಿಂದ 20 ಲಕ್ಷ ರೂಪಾಯಿ ಹಾಗೂ ಪ್ರತಿ ಜಿಲ್ಲಾ ಪಂಚಾಯಿತಿಗೆ 30ರಿಂದ 50 ಲಕ್ಷ ರೂಪಾಯಿವರೆಗೆ ನಗದು ಬಹುಮಾನ, ಪ್ರಶಸ್ತಿ ಪತ್ರ ಹಾಗೂ ಪ್ರಶಸ್ತಿ ಫಲಕ ನೀಡಲಾಗುತ್ತದೆ.

| ಪಂಚಾಯತ್ ಸಂಸ್ಥೆಗಳು | ಗ್ರಾಮ ಪಂಚಾಯತ್ | | | | | ತಾಲೂಕು ಪಂಚಾಯತ್ | | ಜಿಲ್ಲಾ ಪಂಚಾಯತ್ | |
|---|---|---|---|---|---|---|---|---|---|
| ಜನಸಂಖ್ಯೆ 2001ರ ಜನಗಣತಿ ಪ್ರಕಾರ | 1000 ಕ್ಕಿಂತ ಕಡಿಮೆ | 1000 ದಿಂದ 1999 | 2000 ದಿಂದ 4999 | 5000 ದಿಂದ 9999 | 10 ಸಾವಿರ ಕ್ಕಿಂತ ಹೆಚ್ಚು | 50 ಸಾವಿರ ದವರೆಗೆ | 50 ಸಾವಿರಕ್ಕಿಂತ ಹೆಚ್ಚು | 1 ಲಕ್ಷ ದವರೆಗೆ | 1 ಲಕ್ಷಕ್ಕಿಂತ ಹೆಚ್ಚು |
| ಪುರಸ್ಕಾರದ ಮೊತ್ತ | 0.50 | 1.0 | 2.0 | 4.0 | 5.0 | 10.0 | 20.0 | 30.0 | 50.0 |

# 'ನೈರ್ಮಲ್ಯ' : ಸ್ವಚ್ಛತೆಗೆ ಸನ್ಮಾನ

## ರಾಜ್ಯ ಪ್ರಶಸ್ತಿ ಯೋಜನೆಯ ಅನುಷ್ಠಾನ ಮಾರ್ಗಸೂಚಿ




**ಪೀಠಿಕೆ**

ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಸಂಪೂರ್ಣ ಸ್ವಚ್ಛತೆಯನ್ನು ಸಾಧಿಸಲು ಹೆಚ್ಚಿನ ಪ್ರಯತ್ನ ಹಾಗೂ ಒತ್ತು ನೀಡುವಲ್ಲಿ ಕರ್ನಾಟಕ ಸರ್ಕಾರವು ಯಾವತ್ತೂ ಮುಂಚೂಣಿಯಲ್ಲಿದೆ. 1985ರಿಂದಲೂ ಭಾರತ ಸರ್ಕಾರದ ಹಾಗೂ ವಿದೇಶೀ ಸಂಸ್ಥೆಗಳಾದ ಡ್ಯಾನಿಡಾ, ರಾಯಲ್ ನೆದರ್ ಲ್ಯಾಂಡ್, ವಿಶ್ವಬ್ಯಾಂಕ್, ಯುನಿಸೆಫ್ ಮುಂತಾದ ಸಂಸ್ಥೆಗಳ ನೆರವಿನೊಂದಿಗೆ ರಾಜ್ಯವು ಹಲವಾರು ಸ್ವಚ್ಛತೆಯ ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ಗ್ರಾಮೀಣ ಸ್ವಚ್ಛತೆಗೆ ವಿಶೇಷ ಒತ್ತು ನೀಡುವ ಹಿನ್ನೆಲೆಯಲ್ಲಿ 1995ರಲ್ಲಿ 'ನಿರ್ಮಲ ಗ್ರಾಮ ಯೋಜನೆ'ಯನ್ನು ಜಾರಿಗೆ ತಂದು 8ವರ್ಷಗಳ ಕಾಲ ಅನುಷ್ಠಾನಗೊಳಿಸಿತು. ಪ್ರಸ್ತುತ, ಕೇಂದ್ರ ಸರ್ಕಾರ ರೂಪಿಸಿರುವ ಸಂಪೂರ್ಣ ಸ್ವಚ್ಛತಾ ಆಂದೋಲನವನ್ನು ರಾಜ್ಯದ ಎಲ್ಲ 29 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸುತ್ತಿದ್ದು, ವೈಯಕ್ತಿಕ ಸ್ವಚ್ಛತೆ, ಗೃಹ ಸ್ವಚ್ಛತೆ, ಸುರಕ್ಷಿತ ನೀರು, ಮಲದ ಸೂಕ್ತ ವಿಲೇವಾರಿ, ಕಸ ಮತ್ತು ಬಳಸಿದ ಗಲೀಜು ನೀರಿನ ವಿಲೇವಾರಿ ಮುಂತಾದ ಅಂಶಗಳೊಂದಿಗೆ ಸಂಪೂರ್ಣ ಸ್ವಚ್ಛತಾ ಆಂದೋಲನವು ವಿಸ್ತೃತ ಸ್ವರೂಪವನ್ನು ಹೊಂದಿದೆ. ಈ ಕಾರ್ಯಕ್ರಮದ ಅಡಿಯಲ್ಲಿ ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿಗಳನ್ನು ಶೇ.100ರಷ್ಟು ಸಾಧನೆ ಮಾಡುವಂತೆ ಉತ್ತೇಜಿಸಲು ಕೇಂದ್ರ ಸರ್ಕಾರವು 2004ರಿಂದ 'ನಿರ್ಮಲ ಗ್ರಾಮ ಪುರಸ್ಕಾರ' ಯೋಜನೆಯನ್ನು ಜಾರಿಗೆ ತಂದಿದ್ದು, 2005ರಲ್ಲಿ ಮೊದಲ ಸಾಲಿನ ಪ್ರಶಸ್ತಿಯನ್ನು ನೀಡಲಾಯಿತು. ಇದುವರೆಗೆ ರಾಜ್ಯದಿಂದ 600 ಗ್ರಾಮ ಪಂಚಾಯಿತಿಗಳು ನಿರ್ಮಲ ಗ್ರಾಮ ಪುರಸ್ಕಾರಕ್ಕೆ ಪಾತ್ರವಾಗಿವೆ. (2007ನೇ ಸಾಲಿನಲ್ಲಿ 121 ಮತ್ತು 2008ರಲ್ಲಿ 479)

ಗ್ರಾಮೀಣ ಪ್ರದೇಶದ ಸ್ವಚ್ಛತೆಗಾಗಿ ರಾಜ್ಯವು ಹಲವಾರು ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದರೂ, ಹೆಚ್ಚಿನ ಪ್ರಗತಿ ಸಾಧ್ಯವಾಗಿಲ್ಲ. ಕರಾವಳಿ ಹಾಗೂ ಮಲೆನಾಡಿನ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ, ಉತ್ತರ ಕನ್ನಡ ಮತ್ತು ಚಿಕ್ಕಮಗಳೂರು ಮುಂತಾದ ಕೆಲವೇ ಜಿಲ್ಲೆಗಳಲ್ಲಿ ಮಾತ್ರ ಸ್ಫೂರ್ತಿದಾಯಕ ಪ್ರಗತಿ ಸಾಧಿಸಲಾಗಿದೆ. ರಾಜ್ಯದ ಹೆಚ್ಚಿನ ಜಿಲ್ಲೆಗಳಲ್ಲಿನ ಸಾಧನೆ/ಪ್ರಗತಿ ತೃಪ್ತಿದಾಯಕವಾಗಿಲ್ಲ. ಗ್ರಾಮೀಣ ಜನರನ್ನು ಸ್ವಚ್ಛತೆಯ ಸೌಲಭ್ಯಗಳಿಗಾಗಿ ಉತ್ತೇಜಿಸುವುದು ಹಾಗೂ ಈ ನಿಟ್ಟಿನಲ್ಲಿ ಸಮುದಾಯವನ್ನು ಸಂಘಟಿಸುವುದು ಕಷ್ಟಕರ ಸಂಗತಿಯಾಗಿರುವುದೇ ಇದಕ್ಕೆ ಪ್ರಮುಖ ಕಾರಣ. ಶೌಚಾಲಯಗಳನ್ನು ನಿರ್ಮಿಸಿಕೊಂಡರೂ ಸಹ ಬಳಸುವ ಆಸಕ್ತಿ ಜನರಲ್ಲಿ ಇಲ್ಲದಿದ್ದಲ್ಲಿ ನಿರೀಕ್ಷಿತ ಫಲಿತಾಂಶ ಸಾಧಿಸಿದಂತಾಗುವುದಿಲ್ಲ. ಜನರಿಗೆ ಶಿಕ್ಷಣ ನೀಡುವುದು, ಸಮುದಾಯ ಸಂಘಟನೆ, ಪಂಚಾಯತ್ ರಾಜ್ ಸಂಸ್ಥೆಗಳಿಗೆ ಪ್ರೋತ್ಸಾಹ ಧನ ಮುಂತಾದ ಅಂಶಗಳ

ಮತ್ತು ಗ್ರಾಮೀಣ ಜನತೆ ಸ್ವಚ್ಛತೆಯ ಅಭ್ಯಾಸಗಳನ್ನು ಹೊಂದುವಂತೆ ಪ್ರೇರೇಪಿಸಬಹುದು ಎಂದು ನಂಬಲಾಗಿದೆ. ಈ ಎಲ್ಲ ಅಂಶಗಳ ಹಿನ್ನೆಲೆಯಲ್ಲಿ ಸ್ವಚ್ಛತೆಯನ್ನು ಆದ್ಯತೆಯ ಮೇಲೆ ಕೈಗೆತ್ತಿಕೊಂಡು ಉತ್ತಮ ಫಲಿತಾಂಶ ಪಡೆಯಲು ಪಂಚಾಯತ್ ರಾಜ್ ಸಂಸ್ಥೆಗಳನ್ನು ಉತ್ತೇಜಿಸುವ ಸಲುವಾಗಿ ರಾಜ್ಯ ಸರ್ಕಾರವು ರಾಜ್ಯ ಪ್ರಶಸ್ತಿ ಯೋಜನೆಯನ್ನು ಜಾರಿಗೊಳಿಸಲು ಉದ್ದೇಶಿಸಿದೆ.

ಹಿನ್ನೆಲೆ:

ಪ್ರಸ್ತುತ ಜಾರಿಯಲ್ಲಿರುವ ಅನುಷ್ಠಾನ ಪ್ರಕ್ರಿಯೆ ಹಾಗೂ ವಿಧಾನಗಳನ್ನು ಗಮನಿಸಿರುವ ಕರ್ನಾಟಕ ಸರ್ಕಾರವು ಎಲ್ಲಾ ಹಂತದ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಸ್ಪರ್ಧಾತ್ಮಕ ಮನೋಭಾವದ ಮೂಲಕ ಗ್ರಾಮೀಣ ಸ್ವಚ್ಛತೆಯ ಕ್ಷೇತ್ರದಲ್ಲಿ ಉತ್ತಮ ಫಲಿತಾಂಶವನ್ನು ತರಲು ರಾಜ್ಯ ಪ್ರಶಸ್ತಿ ಯೋಜನೆಯನ್ನು ಪರಿಚಯಿಸುತ್ತಿದೆ. ಪಂಚಾಯತ್ ವ್ಯಾಪ್ತಿಯಲ್ಲಿರುವ ಸ್ವಚ್ಛತೆಯ ಸ್ಥಿತಿ, ಆಂದೋಲನಕ್ಕೆ ನೀಡುತ್ತಿರುವ ಪ್ರಾಮುಖ್ಯತೆ ಹಾಗೂ ಸುಸ್ಥಿರತೆಯ ಆಧಾರದ ಮೇಲೆ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ.

ಸುರಕ್ಷಿತ ಮಲ ವಿಲೇವಾರಿ, ಕಸ ಮತ್ತು ಗಲೀಜು ನೀರು ವಿಲೇವಾರಿ ಮತ್ತು ನೀರು ಸರಬರಾಜು ಯೋಜನೆಗಳ ಕಾರ್ಯಾಚರಣೆ ಹಾಗೂ ನಿರ್ವಹಣೆಯಲ್ಲಿ ಯಶಸ್ಸನ್ನು ಸಾಧಿಸಿದ ಪಂಚಾಯತ್ ರಾಜ್ ಸಂಸ್ಥೆಗಳಿಗೆ ವಿವಿಧ ಹಂತಗಳಲ್ಲಿ ಈ ಪ್ರಶಸ್ತಿ ಸಲ್ಲುತ್ತದೆ. ಸ್ವಚ್ಛತೆಯ ಅಭ್ಯಾಸಗಳಲ್ಲಿ ಸುಧಾರಣೆ ಮತ್ತು ಸುಸ್ಥಿರತೆ ತರುವಲ್ಲಿ ಹಾಗೂ ಜನರ ಜೀವನ ಮಟ್ಟವನ್ನು ಸುಧಾರಿಸುವಲ್ಲಿ ಸಮುದಾಯದ ಭಾಗವಹಿಸುವಿಕೆಯನ್ನು ಗುರುತಿಸಲು ಪ್ರಶಸ್ತಿಯು ಪೂರಕವಾಗಿರುತ್ತದೆ. ಗ್ರಾಮೀಣ ಪ್ರದೇಶದ ಸ್ವಚ್ಛತೆಯನ್ನು ಹೆಚ್ಚಿಸುವಲ್ಲಿ ಯಶಸ್ವಿಯಾಗಿರುವ ಮಹಾರಾಷ್ಟ್ರ ರಾಜ್ಯದ ಸಂತ ಗಾಡ್ಗೆಬಾಬ ಸ್ವಚ್ಛ ಗ್ರಾಮ ಸ್ಪರ್ಧೆ, ತಮಿಳುನಾಡು, ಆಂಧ್ರ ಪ್ರದೇಶ್ ಹಾಗೂ ಹಿಮಾಚಲ ಪ್ರದೇಶಗಳ ರಾಜ್ಯ ಪ್ರಶಸ್ತಿ ಯೋಜನೆಗಳ ಆಧಾರದ ಮೇಲೆ ರಾಜ್ಯದಲ್ಲಿಯೂ ನೈರ್ಮಲ್ಯ ಪ್ರಶಸ್ತಿ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ.

ಉದ್ದೇಶ:

1. ನಿರ್ಮಲ ಗ್ರಾಮ ಪುರಸ್ಕಾರ ಪಡೆಯದೆ ಇರುವ ಗ್ರಾಮ ಪಂಚಾಯತಿಗಳಲ್ಲಿ ಆಂದೋಲನಕ್ಕೆ ತೀವ್ರತೆಯನ್ನು ತಂದುಕೊಡುವುದು (Acceleration)

2. ನಿರ್ಮಲ ಗ್ರಾಮ ಪುರಸ್ಕಾರ ಪಡೆದ ಗ್ರಾಮ ಪಂಚಾಯತಿಗಳಲ್ಲಿ ಮಾಡಿರುವ ಸಾಧನೆಯನ್ನು ಉಳಿಸಿ ಬೆಳೆಸಿಕೊಂಡು ಹೋಗುವುದಕ್ಕೆ, ಸುಸ್ಥಿರತೆಗೆ (Sustainability)

3. ಸ್ಪರ್ಧಾತ್ಮಕ ಮನೋಭಾವದ ಮೂಲಕ ಚುನಾಯಿತ ಸದಸ್ಯರು ಮತ್ತು ಜನ ಸಮುದಾಯದ ಭಾಗವಹಿಸುವಿಕೆಯನ್ನು ಉತ್ತೇಜಿಸಲು.

4. ಸ್ವಚ್ಛತೆಗೆ ಸಂಬಂಧಿಸಿದ ರೋಗಗಳ ನಿಯಂತ್ರಣ ಹಾಗೂ ಜನರ ಆರೋಗ್ಯ ಮತ್ತು ಜೀವನ ಮಟ್ಟ ಸುಧಾರಿಸುವುದು.

**ಪ್ರಶಸ್ತಿಯ ಹೆಸರು:**

'ನೈರ್ಮಲ್ಯ' ಎಂಬ ಹೆಸರಿನಿಂದ ಕರೆಯಲಾಗುವ ಈ ಪ್ರಶಸ್ತಿಗೆ ಹೆಚ್ಚಿನ ಮೌಲ್ಯ ಒದಗಿಸಲು ತಾಲ್ಲೂಕು ಮಟ್ಟದಲ್ಲಿ 'ನೈರ್ಮಲ್ಯ', ಜಿಲ್ಲಾ ಮಟ್ಟದಲ್ಲಿ 'ರಜತ ನೈರ್ಮಲ್ಯ', ವಿಭಾಗೀಯ ಮಟ್ಟದಲ್ಲಿ 'ಸ್ವರ್ಣ ನೈರ್ಮಲ್ಯ' ಹಾಗೂ ರಾಜ್ಯ ಮಟ್ಟದಲ್ಲಿ 'ನೈರ್ಮಲ್ಯ ರತ್ನ' ಎಂಬ ಹೆಸರುಗಳಿಂದ ಕರೆಯಲಾಗುತ್ತದೆ.

**ಪರಿಕಲ್ಪನೆ:**

ಸ್ವಚ್ಛತೆಯ ಬಗೆಗಿನ ಸಾಮಾನ್ಯ ಗ್ರಹಿಕೆಯನ್ನು ವಿಸ್ತಾರಗೊಳಿಸುವುದು ಈ ಪ್ರಶಸ್ತಿ ಯೋಜನೆಯ ಪರಿಕಲ್ಪನೆಯಾಗಿದ್ದು, ಪ್ರಶಸ್ತಿಯ ಆಶಯಗಳು ಈ ಕೆಳಕಂಡಂತಿರುತ್ತವೆ:

1. ಶೌಚಾಲಯವೊಂದೇ ಸ್ವಚ್ಛತೆಯೆಂದು ಗ್ರಹಿಸದೆ ಮಲ ಮೂತ್ರವನ್ನು ಸುರಕ್ಷಿತವಾಗಿ ವಿಲೇವಾರಿ ಮಾಡುವುದು ಮತ್ತು ಕುಡಿಯುವ ನೀರಿನ ಯೋಜನೆಗಳಲ್ಲಿ ಸುಸ್ಥಿರತೆ ತರುವುದು;
2. ಒಬ್ಬ ವ್ಯಕ್ತಿಯ ಅಭ್ಯಾಸಗಳಲ್ಲಿ ಬದಲಾವಣೆ ತರುವುದಕ್ಕೆ ಬದಲಾಗಿ ಇಡೀ ಸಮೂಹದ, ಸಮುದಾಯದ ಅಭ್ಯಾಸಗಳಲ್ಲಿ ಬದಲಾವಣೆ ತರುವುದು;
3. ಸರ್ಕಾರವೇ ಮುಂದಾಗಿ ಸೌಲಭ್ಯಗಳನ್ನು ಒದಗಿಸುವ ಬದಲು, ಸರ್ಕಾರದ ಸಹಕಾರದೊಂದಿಗೆ ಸೌಲಭ್ಯಗಳನ್ನು ನಿರ್ಮಿಸಿಕೊಳ್ಳಲು ಸಮುದಾಯಕ್ಕೆ ಕೌಶಲ್ಯ ಸಾಮರ್ಥ್ಯ ನೀಡುವುದು;
4. ಸುರಕ್ಷಿತ ಮಲ ವಿಲೇವಾರಿಯ ಜೊತೆಗೆ ವೈಯಕ್ತಿಕ ಸ್ವಚ್ಛತೆ, ಶಾಲಾ ಮತ್ತು ಅಂಗನವಾಡಿಯ ಸ್ವಚ್ಛತೆ, ಕಸದ ವಿಲೇವಾರಿ, ಸಮುದಾಯದ ಸ್ವಚ್ಛತೆ ಹಾಗೂ ಸಂಪೂರ್ಣ ಸ್ವಚ್ಛತೆ ಸಾಧಿಸುವುದು;
5. ಸಮುದಾಯದ ಸಹಭಾಗಿತ್ವ ಮತ್ತು ಸಾಮೂಹಿಕ ಚಟುವಟಿಕೆಗಳ ಮೂಲಕ ಸಂಪೂರ್ಣ ಸ್ವಚ್ಛತೆ ಸಾಧಿಸುವುದು.

**ವ್ಯಾಪ್ತಿ:**

ತಮ್ಮ ಹಳ್ಳಿಯ ಹಾಗೂ ಪಂಚಾಯಿತಿನ ವ್ಯಾಪ್ತಿಯಲ್ಲಿ ಉತ್ತಮ ಸ್ವಚ್ಛತೆ ಹಾಗೂ ಜನರ ಜೀವನ ಮಟ್ಟದಲ್ಲಿ ಸುಧಾರಣೆ ತರುವಲ್ಲಿ ಯಶಸ್ಸು ಸಾಧಿಸುವ ಪಂಚಾಯತ್ ರಾಜ್ ಸಂಸ್ಥೆಗಳು ಈ ಪ್ರಶಸ್ತಿ ಯೋಜನೆಯ ವಿವಿಧ ಹಂತಗಳ ಸ್ಪರ್ಧೆಯಲ್ಲಿ ಭಾಗವಹಿಸಬಹುದು.

1. **ಸುರಕ್ಷಿತ ಮಲ ವಿಲೇವಾರಿ:** ಎಲ್ಲ ಮನೆಗಳಲ್ಲೂ ಶೌಚಾಲಯದ ಸೌಲಭ್ಯ ಇರಬೇಕು, ಎಲ್ಲರೂ ಶೌಚಾಲಯಗಳನ್ನು ಬಳಸಬೇಕು ಹಾಗೂ ಹಳ್ಳಿ/ಪಂಚಾಯತ್ ವ್ಯಾಪ್ತಿಯಲ್ಲಿ ಬಯಲು ಮಲ ವಿಸರ್ಜನೆ ಸಂಪೂರ್ಣವಾಗಿ ನಿರ್ಮೂಲನೆಗೊಂಡಿರಬೇಕು.
2. **ವೈಯಕ್ತಿಕ ಸ್ವಚ್ಛತೆ:** ಕುಡಿಯುವ ನೀರಿನ ಸಂಗ್ರಹಣೆ, ಬಳಕೆ ವಿಧಾನ, ಆಹಾರ ಹಾಗೂ ಮಕ್ಕಳ ಮಲ ವಿಲೇವಾರಿ ಸೇರಿದಂತೆ ವೈಯಕ್ತಿಕ ಸ್ವಚ್ಛತೆಗೆ ಸಂಬಂಧಿಸಿದ ಅಭ್ಯಾಸಗಳ ಬಗ್ಗೆ ಹೆಚ್ಚಿನ ಅರಿವು ಇರಬೇಕು.
3. **ಸಾಂಸ್ಥಿಕ ಸ್ವಚ್ಛತೆ:** ಎಲ್ಲಾ ಶಾಲೆ ಮತ್ತು ಅಂಗನವಾಡಿ ಶೌಚಾಲಯಗಳು, ಗ್ರಾಮ ಪಂಚಾಯತ್ ಶೌಚಾಲಯ, ಪ್ರಾಥಮಿಕ ಆರೋಗ್ಯ ಕೇಂದ್ರದ ಶೌಚಾಲಯ, ಮುಂತಾದ ಸಾಂಸ್ಥಿಕ ಶೌಚಾಲಯಗಳು ಹಾಗೂ ಸಮುದಾಯ ಶೌಚಾಲಯಗಳ ಬಳಕೆ ಹಾಗೂ ನಿರ್ವಹಣೆ ಉತ್ತಮವಾಗಿರಬೇಕು.

4. **ಗಲೀಜು ನೀರು ವಿಲೇವಾರಿ:** ಚರಂಡಿಗಳ ನಿರ್ವಹಣೆ ಉತ್ತಮವಾಗಿರಬೇಕು. ಗ್ರಾಮಗಳಲ್ಲಿ ಕೊಳಚೆ ನೀರು ನಿಂತಿರಬಾರದು (ನಲ್ಲಿಗಳ ಹತ್ತಿರ, ಚರಂಡಿಗಳಲ್ಲಿ ಹಾಗೂ ಬೀದಿಗಳಲ್ಲಿ) ಮನೆಗಳ ಬಳಸಿದ ನೀರಿಗೆ ಕೈತೋಟ ಇಲ್ಲವೇ ಸರಿಯಾದ ಚರಂಡಿ ಸಂಪರ್ಕ ಇಲ್ಲವೇ ಇಂಗುಗುಂಡಿ ಇರಬೇಕು.
5. **ಕಸ ವಿಲೇವಾರಿ:** ತಿಪ್ಪೆ ಗುಂಡಿಗಳನ್ನು ವ್ಯವಸ್ಥಿತವಾಗಿ ಇಟ್ಟುಕೊಳ್ಳುವುದು. ಚರಂಡಿಗಳಲ್ಲಿ ಕಸ ಕಟ್ಟಿಕೊಂಡಿರಬಾರದು. ಕಸ ಸಂಗ್ರಹಣೆ, ಕಸ ವಿಂಗಡಣೆ ಹಾಗೂ ಸೂಕ್ತ ವಿಲೇವಾರಿ ವ್ಯವಸ್ಥೆ ಇರಬೇಕು. ಕಸದಿಂದ ಸಾವಯವ ಗೊಬ್ಬರದ ತಯಾರಿಕೆಗೆ ಆದ್ಯತೆ ನೀಡುವುದು.
6. **ಕುಡಿಯುವ ನೀರಿನ ಯೋಜನೆಯನ್ನು ಸುಸ್ಥಿತಿಯಲ್ಲಿಡುವುದು:** ಪೈಪು/ವಾಲ್ವ್‌ಗಳಲ್ಲಿ ನೀರು ಸೋರುತ್ತಿರಬಾರದು. ಸಮುದಾಯಕ್ಕೆ ನಿಯಮಿತವಾಗಿ ನೀರು ಸರಬರಾಜು ಇರಬೇಕು. ನಲ್ಲಿ ಗುಂಡಿಗಳಿರಬಾರದು. ಎಲ್ಲಾ ಕುಟುಂಬಗಳಿಗೂ ಹಾಗೂ ಸಾರ್ವಜನಿಕರಿಗೆ ಕುಡಿಯುವ ನೀರಿನ ಸಂಪರ್ಕವಿರಬೇಕು. ನೀರಿನ ಕರದಾಯದ ವಸೂಲಾತಿಯು ಉತ್ತಮವಾಗಿರಬೇಕು. ಶಾಲೆ ಮತ್ತು ಅಂಗನವಾಡಿ ಸೇರಿದಂತೆ ನೀರು ಮತ್ತು ಸ್ವಚ್ಛತೆ ವ್ಯವಸ್ಥೆಗಳು ಉತ್ತಮವಾಗಿರಬೇಕು.
7. **ಸಮುದಾಯದ ಭಾಗವಹಿಸುವಿಕೆ:** ಗ್ರಾಮದಲ್ಲಿ ಒಟ್ಟಾರೆ ಸ್ವಚ್ಛತೆ ಸಾಧಿಸುವಲ್ಲಿ ಊರಿನ ಜನರು, ಚುನಾಯಿತ ಪ್ರತಿನಿಧಿಗಳು, ಗ್ರಾಮದ ಮುಖಂಡರು, ಸಮುದಾಯ ಆಧರಿತ ಸಂಘಟನೆಗಳಾದ ಯುವಕ/ಯುವತಿ ಮಂಡಳಿಗಳು/ಮಹಿಳಾ ಮಂಡಳಿಗಳು, ಸ್ವಸಹಾಯ ಗುಂಪುಗಳು, ಮುಂತಾದ ಎಲ್ಲರೂ ಒಗ್ಗೂಡಿ ಆಂದೋಲನದ ಎಲ್ಲ ಚಟುವಟಿಕೆಗಳಲ್ಲಿ ಕ್ರಿಯಾಶೀಲವಾಗಿ ಭಾಗವಹಿಸುವುದು ಹಾಗೂ ಸಾಮೂಹಿಕ ಕ್ರಮಗಳನ್ನು ಕೈಗೊಳ್ಳುವುದು.
8. **ನೂತನ ಸ್ವಚ್ಛತಾ ಕ್ರಮಗಳು, ಅನ್ವೇಷಣೆಗಳು:** ಗ್ರಾಮದ ಸ್ವಚ್ಛತೆಯನ್ನು ಸುಧಾರಿಸಲು ಹಾಗೂ ಉತ್ತಮ ರೀತಿಯಲ್ಲಿ ಮುಂದುವರೆಸಿಕೊಂಡು ಹೋಗಲು ಸಮುದಾಯವು ಅಥವಾ ಪಂಚಾಯತ್ ರಾಜ್ ಸಂಸ್ಥೆಗಳು ಕೈಗೊಳ್ಳುವ ಅನ್ವೇಷಣೆಗಳು ಹಾಗೂ ಇತರ ನೂತನ ಕ್ರಮಗಳು.

**ಪ್ರಶಸ್ತಿಯ ವಿವರಗಳು:** "ನೈರ್ಮಲ್ಯ" ರಾಜ್ಯ ಪ್ರಶಸ್ತಿಯನ್ನು ವಿವಿಧ ವಿಭಾಗಗಳಲ್ಲಿ ನೀಡಲಾಗುವುದು.

ಅ. ಈಗಾಗಲೇ ನಿರ್ಮಲ ಗ್ರಾಮ ಪುರಸ್ಕಾರ ಪಡೆದ ಗ್ರಾಮ ಪಂಚಾಯತಿಗಳಿಗೆ ಸುಸ್ಥಿರತೆಗಾಗಿ (Sustainability) ಪ್ರಶಸ್ತಿ
ಆ. ನಿರ್ಮಲ ಗ್ರಾಮ ಪುರಸ್ಕಾರ ಪಡೆಯದಿರುವ ಗ್ರಾಮ ಪಂಚಾಯತ್‌ಗಳಲ್ಲಿ ಆಂದೋಲನಕ್ಕೆ ತೀವ್ರತೆ (Acceleration) ತಂದುಕೊಡಲು ಗ್ರಾಮ ಪಂಚಾಯತ್ ಮಟ್ಟದ ಪ್ರಶಸ್ತಿ
ಇ. ಶಾಲೆ ಮತ್ತು ಅಂಗನವಾಡಿಯಲ್ಲಿ ಉತ್ತಮ ಸಾಧನೆ ಮಾಡಿರುವ ಶಾಲೆಗಳಿಗೆ 'ಉತ್ತಮ ಶಾಲೆ ಪ್ರಶಸ್ತಿ' ಮತ್ತು 'ಉತ್ತಮ ಅಂಗನವಾಡಿ ಪ್ರಶಸ್ತಿ'
ಈ. ಗ್ರಾಮಗಳ/ವಾರ್ಡುಗಳ ಹಂತದಲ್ಲಿ ಸಹ ಆಂದೋಲನವನ್ನು ತ್ವರಿತಗೊಳಿಸುವ ಉದ್ದೇಶದಿಂದ ತೀವ್ರತೆ ಪ್ರಶಸ್ತಿ

## ವಿವಿಧ ಹಂತಗಳಲ್ಲಿ ನೀಡಲಾಗುವ ಪ್ರಶಸ್ತಿಗಳು:

ಅತ್ಯುತ್ತಮ ಗ್ರಾಮ/ವಾರ್ಡ್

- ತಾಲ್ಲೂಕು ಮಟ್ಟ – ಅತ್ಯುತ್ತಮ ಸ್ವಚ್ಛ ಗ್ರಾಮ ಪಂಚಾಯತಿ

- ಜಿಲ್ಲಾ ಮಟ್ಟ – 3 ಅತ್ಯುತ್ತಮ ಸ್ವಚ್ಛ ಗ್ರಾಮ ಪಂಚಾಯಿತಿಗಳು (1ನೇ, 2ನೇ ಹಾಗೂ 3ನೇ ಸ್ಥಾನಗಳು)
- ವಿಭಾಗೀಯ ಮಟ್ಟ – 3 ಅತ್ಯುತ್ತಮ ಸ್ವಚ್ಛ ಗ್ರಾಮ ಪಂಚಾಯಿತಿಗಳು (1ನೇ, 2ನೇ ಹಾಗೂ 3ನೇ ಸ್ಥಾನಗಳು)
- ರಾಜ್ಯ ಮಟ್ಟ – 3 ಅತ್ಯುತ್ತಮ ಸ್ವಚ್ಛ ಗ್ರಾಮ ಪಂಚಾಯಿತಿಗಳು (1ನೇ, 2ನೇ ಹಾಗೂ 3ನೇ ಸ್ಥಾನಗಳು)

**ಅತ್ಯುತ್ತಮ ತಾಲ್ಲೂಕು**

- ವಿಭಾಗೀಯ ಮಟ್ಟ – 1 ಅತ್ಯುತ್ತಮ ಸ್ವಚ್ಛ ತಾಲ್ಲೂಕು ಪಂಚಾಯಿತಿ
- ರಾಜ್ಯ ಮಟ್ಟ – 1 ಅತ್ಯುತ್ತಮ ಸ್ವಚ್ಛ ತಾಲೂಕು ಪಂಚಾಯಿತಿ

**ಅತ್ಯುತ್ತಮ ಜಿಲ್ಲೆ**

- ರಾಜ್ಯ ಮಟ್ಟ – 1 ಅತ್ಯುತ್ತಮ ಸ್ವಚ್ಛ ಜಿಲ್ಲಾ ಪಂಚಾಯಿತಿ

**ಅತ್ಯುತ್ತಮ ಶಾಲೆ, ಅಂಗನವಾಡಿ, ಸಂಸ್ಥೆ ಮತ್ತು ವ್ಯಕ್ತಿಗಳು**

- ತಾಲೂಕು ಮಟ್ಟ – ಅತ್ಯುತ್ತಮ ಸ್ವಚ್ಛ ಶಾಲೆ
- ತಾಲೂಕು ಮಟ್ಟ – ಅತ್ಯುತ್ತಮ ಸ್ವಚ್ಛ ಅಂಗನವಾಡಿ
- ಜಿಲ್ಲಾ ಮಟ್ಟ – ಅತ್ಯುತ್ತಮ ಸ್ವಚ್ಛ ಶಾಲೆ
- ಜಿಲ್ಲಾ ಮಟ್ಟ – ಅತ್ಯುತ್ತಮ ಸ್ವಚ್ಛ ಅಂಗನವಾಡಿ
- ಸ್ವಚ್ಛತೆಯ ಸಾಧಕರಿಗೆ/ಸಂಸ್ಥೆಗಳಿಗೆ

**ಪ್ರಶಸ್ತಿಗೆ ಅರ್ಹತೆ:**

- ಹಳ್ಳಿಯ/ಪಂಚಾಯತ್ ವ್ಯಾಪ್ತಿಯ ಎಲ್ಲ ಕುಟುಂಬಗಳು ಶೌಚಾಲಯ ಹೊಂದಿದ್ದು, ಕುಟುಂಬದ ಎಲ್ಲರೂ ಮಲ ಮೂತ್ರ ವಿಸರ್ಜನೆಗೆ ಶೌಚಾಲಯವನ್ನೇ ಬಳಸುತ್ತಿರಬೇಕು.

- ವ್ಯಾಪ್ತಿಯ ಎಲ್ಲ ಶಾಲೆ ಮತ್ತು ಅಂಗನವಾಡಿಗಳಲ್ಲಿ ಶೌಚಾಲಯ ಮತ್ತು ನೀರಿನ ಪೂರೈಕೆ ಇದ್ದು, ಉತ್ತಮ ಬಳಕೆ ಹಾಗೂ ನಿರ್ವಹಣೆ ಇರಬೇಕು.

- ಶಾಲೆ ಮತ್ತು ಅಂಗನವಾಡಿಯ ಮಕ್ಕಳಲ್ಲಿ ವೈಯಕ್ತಿಕ ಸ್ವಚ್ಛತೆಯ ಅಭ್ಯಾಸಗಳು ರೂಢಿಯಲ್ಲಿರಬೇಕು.

- ಕಸ ಹಾಗೂ ಗಲೀಜು ನೀರಿನ ನಿರ್ವಹಣೆ ಮತ್ತು ವಿಲೇವಾರಿ ಸಮರ್ಪಕವಾಗಿರಬೇಕು.

- ಕುಡಿಯುವ ನೀರಿನ ಮೂಲಗಳ ಸಂರಕ್ಷಣೆ ಹಾಗೂ ಪರಿಸರದ ಸ್ವಚ್ಛತೆಗೆ ಸೂಕ್ತವಾದ ಶುಚಿತ್ವದ ಅಭ್ಯಾಸಗಳನ್ನು ರೂಢಿಸಿಕೊಂಡಿರಬೇಕು.

- ನಿರ್ಮಲ ಗ್ರಾಮ ಪುರಸ್ಕಾರದ ನಗದು ಬಹುಮಾನವನ್ನು ನಿಗದಿತ ಕೆಲಸಗಳಿಗೆ, ವಿನೂತನ ರೀತಿಯಲ್ಲಿ ಬಳಸಿರಬೇಕು.

- ಆಂದೋಲನದ ಅನುಷ್ಠಾನದಲ್ಲಿ ವಿನೂತನ ವಿಧಾನಗಳನ್ನು ಅಳವಡಿಸಿಕೊಂಡಿರಬೇಕು.

ಆಯ್ಕೆ ವಿಧಾನ:

1. **ತಾಲೂಕು ಮಟ್ಟ – ಅತ್ಯುತ್ತಮ ಸ್ವಚ್ಛ ಗ್ರಾಮ ಪಂಚಾಯಿತಿ ಪ್ರಶಸ್ತಿ – ನೈರ್ಮಲ್ಯ :** ತಾಲೂಕಿನಲ್ಲಿ ಈವರೆಗೆ ನಿರ್ಮಲ ಗ್ರಾಮ ಪುರಸ್ಕಾರ ಪಡೆಯದ ಗ್ರಾಮ ಪಂಚಾಯಿತಿಗಳ ಪೈಕಿ ಶೇಕಡ ನೂರರಷ್ಟು ಸ್ವಚ್ಛತೆಯನ್ನು ಹೊಂದಿರುವ, ಬಯಲು ಮಲವಿಸರ್ಜನೆಯಿಂದ ಮುಕ್ತಗೊಂಡು ಸ್ವಚ್ಛತಾ ಆಂದೋಲನದ ಎಲ್ಲ ಅಂಶಗಳನ್ನು ಸಾಧಿಸಿರುವ 3 ಗ್ರಾಮ ಪಂಚಾಯಿತಿಗಳನ್ನು ತೀವ್ರಗತಿಯ (Acceleration) ಸಾಧನೆಯ ಆಧಿಯಲ್ಲಿ ಸಂಬಂಧಿಸಿದ ತಾಲೂಕು ಸಮಿತಿಯು ನೈರ್ಮಲ್ಯ ಸ್ಪರ್ಧೆಗೆ ಆಯ್ಕೆ ಮಾಡುತ್ತದೆ. ಈ ರೀತಿ ಆಯ್ಕೆ ಮಾಡಲಾದ ಗ್ರಾಮ ಪಂಚಾಯತ್‌ಗಳನ್ನು ಮತ್ತೊಂದು ತಾಲೂಕು ಸಮಿತಿಯು ಮೌಲ್ಯ ಮಾಪನ ಮಾಡಿ ಮೂರರಲ್ಲಿ ಒಂದು ಅತ್ಯುತ್ತಮ ಸ್ವಚ್ಛ ಗ್ರಾಮ ಪಂಚಾಯಿತಿಯನ್ನು ತಾಲೂಕು ಮಟ್ಟದ **"ನೈರ್ಮಲ್ಯ"** ಪ್ರಶಸ್ತಿಗೆ ಆಯ್ಕೆ ಮಾಡುತ್ತದೆ.

   ಹಾಗೆಯೇ ತಾಲೂಕಿನ ಎಲ್ಲ ಗ್ರಾಮ ಪಂಚಾಯಿತಿಗಳೂ ಕೇಂದ್ರ ಸರ್ಕಾರ ನೀಡುವ ನಿರ್ಮಲ ಗ್ರಾಮ ಪುರಸ್ಕಾರ ಪಡೆದಿದ್ದಲ್ಲಿ ಇವುಗಳ ಪೈಕಿ ಸುಸ್ಥಿರತೆಯನ್ನು ಸಾಧಿಸಿದ 3 ಅತ್ಯುತ್ತಮ ಸ್ವಚ್ಛ ಗ್ರಾಮ ಪಂಚಾಯಿತಿಗಳನ್ನು ಸುಸ್ಥಿರತೆ (Sustainability) ಸಾಧನೆಯ ಆಧಿಯಲ್ಲಿ ಸಂಬಂಧಿಸಿದ ತಾಲೂಕು ಸಮಿತಿಯು ಆಯ್ಕೆ ಮಾಡುತ್ತದೆ. ಈ ರೀತಿ ಆಯ್ಕೆ ಮಾಡಲಾದ ಗ್ರಾಮ ಪಂಚಾಯತ್‌ಗಳನ್ನು ಮತ್ತೊಂದು ತಾಲೂಕು ಸಮಿತಿಯು ಮೌಲ್ಯ ಮಾಪನ ಮಾಡಿ ಮೂರರಲ್ಲಿ ಒಂದು ಗ್ರಾಮ ಪಂಚಾಯಿತಿಯನ್ನು ತಾಲೂಕು ಮಟ್ಟದ **"ನೈರ್ಮಲ್ಯ"** ಪ್ರಶಸ್ತಿಗೆ ಆಯ್ಕೆ ಮಾಡುತ್ತದೆ. **(ಗಮನಿಸಬೇಕಾದ ಅಂಶ: ತಾಲೂಕುಗಳು ಪರಸ್ಪರ ಮೌಲ್ಯ ಮಾಪನ ಮಾಡುವಂತಿಲ್ಲ.)** ಒಂದೊಮ್ಮೆ ತಾಲೂಕಿನಲ್ಲಿ ಒಂದೇ ಗ್ರಾಮ ಪಂಚಾಯಿತಿಯು ಶೇಕಡ 100ರಷ್ಟು ಸ್ವಚ್ಛತೆಯನ್ನು ಸಾಧಿಸಿದ್ದಲ್ಲಿ ಅಂತಹ ಗ್ರಾಮ ಪಂಚಾಯಿತಿಯ ಅರ್ಜಿಯನ್ನೂ ಸಹ ತಾಲೂಕು ಮಟ್ಟದ ನೈರ್ಮಲ್ಯ ಪ್ರಶಸ್ತಿ ಸ್ಪರ್ಧೆಗೆ ಪರಿಗಣಿಸುವುದು. ತಾಲೂಕು ಮಟ್ಟದಲ್ಲಿ ನೈರ್ಮಲ್ಯ ಪ್ರಶಸ್ತಿ ಪಡೆದ ಗ್ರಾಮ ಪಂಚಾಯಿತಿಯು ಮಾತ್ರ ಜಿಲ್ಲಾ ಮಟ್ಟದ "ರಜತ ನೈರ್ಮಲ್ಯ" ಸ್ಪರ್ಧೆಯಲ್ಲಿ ಭಾಗವಹಿಸಬಹುದು.

2. **ಜಿಲ್ಲಾ ಮಟ್ಟ – ಅತ್ಯುತ್ತಮ ಸ್ವಚ್ಛ ಗ್ರಾಮ ಪಂಚಾಯಿತಿ ಪ್ರಶಸ್ತಿ – ರಜತ ನೈರ್ಮಲ್ಯ:** ತಾಲೂಕುಗಳಿಂದ ಬಂದ ಅತ್ಯುತ್ತಮ ಗ್ರಾಮ ಪಂಚಾಯಿತಿಗಳನ್ನು ಜಿಲ್ಲಾ ಸಮಿತಿಯು ಮೌಲ್ಯ ಮಾಪನ ಮಾಡಿ ಇವುಗಳ ಪೈಕಿ 3 ಅತ್ಯುತ್ತಮ ಸ್ವಚ್ಛ ಗ್ರಾಮ ಪಂಚಾಯಿತಿಗಳನ್ನು ಜಿಲ್ಲಾ ಮಟ್ಟದ **"ರಜತ ನೈರ್ಮಲ್ಯ"** ಪ್ರಶಸ್ತಿಗೆ, ಕ್ರಮವಾಗಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಎಂದು ಆಯ್ಕೆ ಮಾಡುತ್ತದೆ. ಇವುಗಳ ಪೈಕಿ ಪ್ರಥಮ ಸ್ಥಾನ ಪಡೆದ ಗ್ರಾಮ ಪಂಚಾಯಿತಿಯು ಮಾತ್ರ ವಿಭಾಗ ಮಟ್ಟದ "ಸ್ವರ್ಣ ನೈರ್ಮಲ್ಯ" ಪ್ರಶಸ್ತಿಗೆ ಸ್ಪರ್ಧಿಸಬಹುದು. **(ಗಮನಿಸಿ: ಜಿಲ್ಲೆಗಳು ಪರಸ್ಪರ ಮೌಲ್ಯ ಮಾಪನ ಮಾಡುವಂತಿಲ್ಲ.)**

3. **ವಿಭಾಗ ಮಟ್ಟ – ಅತ್ಯುತ್ತಮ ಸ್ವಚ್ಛ ಗ್ರಾಮ ಪಂಚಾಯಿತಿ ಪ್ರಶಸ್ತಿ – ಸ್ವರ್ಣ ನೈರ್ಮಲ್ಯ:** ವಿಭಾಗ ಸಮಿತಿಯು ಜಿಲ್ಲೆಗಳಿಂದ ಬಂದ ರಜತ ನೈರ್ಮಲ್ಯ ಪ್ರಶಸ್ತಿ ಪಡೆದ ಗ್ರಾಮ ಪಂಚಾಯಿತಿಗಳನ್ನು ಮೌಲ್ಯ ಮಾಪನ ಮಾಡಿ ಈ ಪೈಕಿ 3 ಅತ್ಯುತ್ತಮ ಸ್ವಚ್ಛ ಗ್ರಾಮ ಪಂಚಾಯಿತಿಗಳನ್ನು 'ಸ್ವರ್ಣ ನೈರ್ಮಲ್ಯ' ಪ್ರಶಸ್ತಿಗೆ, ಕ್ರಮವಾಗಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಎಂದು ಆಯ್ಕೆ ಮಾಡುತ್ತದೆ. ಇವುಗಳ ಪೈಕಿ ಪ್ರಥಮ ಸ್ಥಾನ ಪಡೆದ ಗ್ರಾಮ ಪಂಚಾಯಿತಿಯು ರಾಜ್ಯ ಮಟ್ಟದ 'ನೈರ್ಮಲ್ಯ ರತ್ನ' ಪ್ರಶಸ್ತಿಗೆ ಸ್ಪರ್ಧಿಸಬಹುದು.

4. **ರಾಜ್ಯ ಮಟ್ಟ – ಅತ್ಯುತ್ತಮ ಸ್ವಚ್ಛ ಗ್ರಾಮ ಪಂಚಾಯಿತಿ ಪ್ರಶಸ್ತಿ – ನೈರ್ಮಲ್ಯ ರತ್ನ:** ವಿಭಾಗ ಮಟ್ಟದಿಂದ ಬಂದ ಗ್ರಾಮ ಪಂಚಾಯಿತಿಗಳನ್ನು ರಾಜ್ಯ ಸಮಿತಿಯು ಮೌಲ್ಯ ಮಾಪನ ಮಾಡಿ ಇವುಗಳ ಪೈಕಿ ಮೂರು ಅತ್ಯುತ್ತಮ ಗ್ರಾಮ ಪಂಚಾಯಿತಿಗಳನ್ನು ರಾಜ್ಯ ಮಟ್ಟದ **'ನೈರ್ಮಲ್ಯ ರತ್ನ'** ಪ್ರಶಸ್ತಿಗೆ, ಕ್ರಮವಾಗಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಎಂದು ಆಯ್ಕೆ ಮಾಡುತ್ತದೆ.

5. **ವಿಭಾಗ ಮಟ್ಟ – ಅತ್ಯುತ್ತಮ ತಾಲೂಕು ಪಂಚಾಯಿತಿ ಪ್ರಶಸ್ತಿ:** ವಿಭಾಗ ಮಟ್ಟದ ಉತ್ತಮ ತಾಲೂಕು ಸ್ಪರ್ಧೆಗೆ ಸ್ವೀಕೃತವಾದ ಅರ್ಜಿಗಳನ್ನು ಸಂಬಂಧಿಸಿದ ಜಿಲ್ಲಾ ಸಮಿತಿಯು ಮೌಲ್ಯ ಮಾಪನ ಮಾಡಿ ಅವುಗಳಲ್ಲಿ ಒಂದು ಅತ್ಯುತ್ತಮ ತಾಲೂಕು ಪಂಚಾಯಿತಿಯನ್ನು ಮಾತ್ರ ವಿಭಾಗ ಮಟ್ಟದ ಪ್ರಶಸ್ತಿ ಸ್ಪರ್ಧೆಗೆ ಕಳುಹಿಸುವುದು. ವಿಭಾಗ ಸಮಿತಿಯು ಜಿಲ್ಲೆಗಳಿಂದ ಬಂದ ಅತ್ಯುತ್ತಮ ತಾಲೂಕು ಪಂಚಾಯಿತಿಗಳನ್ನು ಮೌಲ್ಯ ಮಾಪನ ಮಾಡಿ ಇವುಗಳ ಪೈಕಿ ಒಂದು ಅತ್ಯುತ್ತಮ ತಾಲೂಕು ಪಂಚಾಯಿತಿಯನ್ನು ವಿಭಾಗೀಯ ಮಟ್ಟದ **'ಸ್ವರ್ಣ ನೈರ್ಮಲ್ಯ'** ಪ್ರಶಸ್ತಿಗೆ ಆಯ್ಕೆ ಮಾಡುತ್ತದೆ. ಹಾಗೂ ವಿಭಾಗೀಯ ಮಟ್ಟದಲ್ಲಿ ಪ್ರಶಸ್ತಿ ಪಡೆದ ತಾಲೂಕು ಪಂಚಾಯಿತಿಯು ರಾಜ್ಯ ಮಟ್ಟದ 'ನೈರ್ಮಲ್ಯ ರತ್ನ' ಪ್ರಶಸ್ತಿಗೆ ಸ್ಪರ್ಧಿಸಬಹುದು.

6. **ರಾಜ್ಯ ಮಟ್ಟ – ಅತ್ಯುತ್ತಮ ಸ್ವಚ್ಛ ತಾಲೂಕು ಪಂಚಾಯಿತಿ ಪ್ರಶಸ್ತಿ – ನೈರ್ಮಲ್ಯ ರತ್ನ:** ವಿಭಾಗ ಮಟ್ಟದಿಂದ ಬಂದ ಅತ್ಯುತ್ತಮ ತಾಲೂಕು ಪಂಚಾಯಿತಿಗಳನ್ನು ರಾಜ್ಯ ಸಮಿತಿಯು ಮೌಲ್ಯ ಮಾಪನ ಮಾಡಿ ಇವುಗಳ ಪೈಕಿ ಒಂದು ಅತ್ಯುತ್ತಮ ಸ್ವಚ್ಛ ತಾಲೂಕು ಪಂಚಾಯಿತಿಯನ್ನು ರಾಜ್ಯ ಮಟ್ಟದ **'ನೈರ್ಮಲ್ಯ ರತ್ನ'** ಪ್ರಶಸ್ತಿಗೆ ಆಯ್ಕೆ ಮಾಡುತ್ತದೆ.

7. **ರಾಜ್ಯ ಮಟ್ಟ – ಅತ್ಯುತ್ತಮ ಸ್ವಚ್ಛ ಜಿಲ್ಲಾ ಪಂಚಾಯಿತಿ ಪ್ರಶಸ್ತಿ – ನೈರ್ಮಲ್ಯ ರತ್ನ:** ಅತ್ಯುತ್ತಮ ಜಿಲ್ಲಾ ಪಂಚಾಯಿತಿ ಪ್ರಶಸ್ತಿಗಾಗಿ ಬಂದ ಪ್ರಸ್ತಾವನೆಗಳನ್ನು ರಾಜ್ಯ ಸಮಿತಿಯು ಮೌಲ್ಯ ಮಾಪನ ಮಾಡಿ ಈ ಪೈಕಿ ಒಂದು ಅತ್ಯುತ್ತಮ ಸ್ವಚ್ಛ ಜಿಲ್ಲಾ ಪಂಚಾಯಿತಿಯನ್ನು ರಾಜ್ಯ **'ನೈರ್ಮಲ್ಯ ರತ್ನ'** ಪ್ರಶಸ್ತಿಗೆ ಆಯ್ಕೆ ಮಾಡುತ್ತದೆ.

8. **ಉತ್ತಮ ಶಾಲೆ ಪ್ರಶಸ್ತಿ:** ಉತ್ತಮ ಸ್ವಚ್ಛತೆಯ ಸೌಲಭ್ಯಗಳು, ಅಭ್ಯಾಸಗಳು ಹಾಗೂ ಸ್ವಚ್ಛ ಮತ್ತು ಸುಂದರ ಪರಿಸರ ಹೊಂದಿರುವ ಶಾಲೆಗಳಿಗೆ ಉತ್ತಮ ಶಾಲೆ ಪ್ರಶಸ್ತಿ ನೀಡಲಾಗುವುದು. ಈ ಸ್ಪರ್ಧೆಯನ್ನು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ನಡೆಸಲಾಗುತ್ತದೆ. ತಾಲೂಕು ಮಟ್ಟದಲ್ಲಿ ಅತ್ಯುತ್ತಮ ಶಾಲೆಗೆ 20,000/– ರೂಪಾಯಿ ನಗದು ಬಹುಮಾನ, ಜಿಲ್ಲಾ ಮಟ್ಟದ ಅತ್ಯುತ್ತಮ ಶಾಲೆಗೆ 30,000/–ಹಾಗೂ ಪ್ರಶಸ್ತಿ ಫಲಕ ನೀಡಲಾಗುವುದು. ಶಾಲೆಗಳ ಮೌಲ್ಯಮಾಪನ ನಡೆಸಲು ಸೂಕ್ತ ಮಾನದಂಡಗಳನ್ನು ನಿಗದಿಗೊಳಿಸಲಾಗಿದೆ.



9. **ಉತ್ತಮ ಅಂಗನವಾಡಿ ಪ್ರಶಸ್ತಿ:** ಉತ್ತಮ ಸ್ವಚ್ಛತೆಯ ಸೌಲಭ್ಯಗಳು, ಅಭ್ಯಾಸಗಳು ಹಾಗೂ ಸ್ವಚ್ಛ ಮತ್ತು ಸುಂದರ ಪರಿಸರ ಹೊಂದಿರುವ ಅಂಗನವಾಡಿಗಳಿಗೆ ಉತ್ತಮ ಅಂಗನವಾಡಿ ಪ್ರಶಸ್ತಿ ನೀಡಲಾಗುವುದು. ಈ ಸ್ಪರ್ಧೆಯನ್ನು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ನಡೆಸಲಾಗುತ್ತದೆ. ತಾಲ್ಲೂಕು ಮಟ್ಟದ ಅತ್ಯುತ್ತಮ ಅಂಗನವಾಡಿಗೆ 10,000/- ರೂಪಾಯಿ ನಗದು ಬಹುಮಾನ ಹಾಗೂ ಜಿಲ್ಲಾ ಮಟ್ಟದ ಅತ್ಯುತ್ತಮ ಅಂಗನವಾಡಿಗೆ 15,000/- ರೂಪಾಯಿ ನಗದು ಬಹುಮಾನ ಮತ್ತು ಪ್ರಶಸ್ತಿ ಫಲಕ ನೀಡಲಾಗುವುದು. ಅಂಗನವಾಡಿಗಳ ಮೌಲ್ಯಮಾಪನ ನಡೆಸಲು ಸೂಕ್ತ ಮಾನದಂಡಗಳನ್ನು ನಿಗದಿಗೊಳಿಸಲಾಗಿದೆ.

10. **ವ್ಯಕ್ತಿ/ಸಂಸ್ಥೆಗಳಿಗೆ ಪ್ರಶಸ್ತಿ :** ಆಂದೋಲನದಲ್ಲಿ ಕ್ರಿಯಾಶೀಲವಾಗಿ ತೊಡಗಿಸಿಕೊಂಡು, ಹೊಸತನಗಳನ್ನು ಅನುಷ್ಠಾನಕ್ಕೆ ತಂದ, ಗ್ರಾಮ ಅಥವಾ ಗ್ರಾಮ ಪಂಚಾಯತ್ ಇಲ್ಲವೇ ತಾಲ್ಲೂಕು ಹಾಗೂ ಜಿಲ್ಲೆಗಳಲ್ಲಿ ಆಂದೋಲನದ ಅನುಷ್ಠಾನಕ್ಕೆ ಗಣನೀಯ ಕೊಡುಗೆ ಸಲ್ಲಿಸಿದ ವ್ಯಕ್ತಿಗಳು ಹಾಗೂ ಸಂಸ್ಥೆಗಳಿಗೆ ನೈರ್ಮಲ್ಯ ಪ್ರಶಸ್ತಿ ನೀಡಲಾಗುವುದು. ಇದರಲ್ಲಿ ಪ್ರಶಸ್ತಿ ಪತ್ರ ಮತ್ತು ಫಲಕ ನೀಡಲಾಗುವುದು. ನಗದು ಬಹುಮಾನ ಇರುವುದಿಲ್ಲ.

## ಜಿಲ್ಲಾ ಮಟ್ಟದ ಪ್ರಶಸ್ತಿ

ಆಯ್ಕೆ ವಿಧಾನ :

**ಜಿಲ್ಲಾ ಹಂತ – ಅತ್ಯುತ್ತಮ ಸ್ವಚ್ಛ ಗ್ರಾಮ/ವಾರ್ಡ್ ಪ್ರಶಸ್ತಿ :** ಆಂದೋಲನವನ್ನು ತ್ವರಿತಗೊಳಿಸುವ ಉದ್ದೇಶದಿಂದ ಅನುಷ್ಠಾನದ ಶೀಘ್ರತೆಯನ್ನು ಗಮನಿಸಿ (Acceleration) ಗ್ರಾಮ/ವಾರ್ಡುಗಳಿಗೆ ಅತ್ಯುತ್ತಮ ಸ್ವಚ್ಛ ಗ್ರಾಮ/ವಾರ್ಡ್ ಪ್ರಶಸ್ತಿ ನೀಡಲಾಗುವುದು. ಪ್ರತಿ ತಾಲೂಕಿನಲ್ಲಿ ನಾಲ್ಕು ಅತ್ಯುತ್ತಮ ಸ್ವಚ್ಛ ಗ್ರಾಮ/ವಾರ್ಡು ಪ್ರಶಸ್ತಿ ನೀಡಲಾಗುತ್ತದೆ. ಪ್ರತಿ ಗ್ರಾಮ/ವಾರ್ಡ್‌ಗೆ 25000/- ರೂಪಾಯಿ ನಗದು ಬಹುಮಾನ ನಿಗಧಿಪಡಿಸಿದೆ. ಯಾವ ತಾಲೂಕಿನ ಒಂದೂ ಗ್ರಾಮ ಪಂಚಾಯಿತಿಗೆ ನಿರ್ಮಲ ಗ್ರಾಮ ಪುರಸ್ಕಾರ ದೊರೆತಿರುವುದಿಲ್ಲವೋ ಅಂತಹ ತಾಲೂಕುಗಳ ಗ್ರಾಮ/ವಾರ್ಡುಗಳು ಮಾತ್ರ ಸ್ಪರ್ಧೆಯಲ್ಲಿ ಭಾಗವಹಿಸಬಹುದು. ತಾಲೂಕಿನ ಒಂದು ಗ್ರಾಮ ಪಂಚಾಯಿತಿಗೆ ನಿರ್ಮಲ ಗ್ರಾಮ ಪುರಸ್ಕಾರ ಲಭಿಸಿದರೆ ಕೂಡಲೇ ಆ ತಾಲೂಕಿಗೆ ಅತ್ಯುತ್ತಮ ಸ್ವಚ್ಛ ಗ್ರಾಮ/ವಾರ್ಡ್ ಪ್ರಶಸ್ತಿ ನಿಂತು ಹೋಗುತ್ತದೆ.

**ಪ್ರಶಸ್ತಿ ಪ್ರಧಾನ :** ವಿವಿಧ ಹಂತಗಳಲ್ಲಿ ಸ್ಪರ್ಧಿಸಿ ಯಶಸ್ಸು ಸಾಧಿಸಿದ ಪಂಚಾಯತ್ ರಾಜ್ ಸಂಸ್ಥೆಗಳು ನಗದು ಬಹುಮಾನ ಹಾಗೂ ಪ್ರಶಸ್ತಿ ಫಲಕವನ್ನು ಪಡೆಯುತ್ತವೆ. ಈ ಪ್ರಶಸ್ತಿಯ ಹಣವನ್ನು ಕಡ್ಡಾಯವಾಗಿ ಸ್ವಚ್ಛತೆಯ ಕೆಲಸಗಳಿಗೆ ಮಾತ್ರ ಬಳಸಬೇಕು. ಪ್ರಶಸ್ತಿಗಳನ್ನು ರಾಜ್ಯದ ರಾಜ್ಯಪಾಲರು, ಮುಖ್ಯ ಮಂತ್ರಿಯವರು, ಸಚಿವರು, ಅಧಿಕಾರಿಗಳು ಹಾಗೂ ಇತರೆ ಗೌರವಾನ್ವಿತರಿರುವ ಸಾರ್ವಜನಿಕ ಸಮಾರಂಭದಲ್ಲಿ ಪ್ರಧಾನ ಮಾಡಲಾಗುವುದು.

**ಬಹುಮಾನದ ಮೊತ್ತ :** ವಿವಿಧ ಹಂತಗಳಲ್ಲಿ ಯಶಸ್ಸು ಸಾಧಿಸಿದ ಪಂಚಾಯತ್ ರಾಜ್ ಸಂಸ್ಥೆಗಳಿಗೆ ನೀಡುವ ಬಹುಮಾನದ ಒಟ್ಟು ಮೊತ್ತ 1000 ಲಕ್ಷ ರೂಪಾಯಿಗಳಾಗಿದ್ದು, ವಿವರಗಳು ಈ ಕೆಳಕಂಡಂತಿದೆ :

## ಪ್ರಶಸ್ತಿಯ ವಿವರಗಳು

(ಲಕ್ಷ ರೂಗಳಲ್ಲಿ)

| ಕ್ರ ಸಂ | ವಿವರಗಳು | ಪ್ರಶಸ್ತಿಗಳು | ಬಹುಮಾನ ಮೊತ್ತ | ಒಟ್ಟು ಮೊತ್ತ |
|---|---|---|---|---|
| 1 | ತಾಲ್ಲೂಕು ಮಟ್ಟದ ಅತ್ಯುತ್ತಮ ಸ್ವಚ್ಛ ಗ್ರಾಮ ಪಂಚಾಯತಿ | 176 | 1.0 | 176.00 |
| 2 | ಜಿಲ್ಲಾ ಮಟ್ಟದ 3 ಅತ್ಯುತ್ತಮ ಸ್ವಚ್ಛ ಗ್ರಾಮ ಪಂಚಾಯತಿಗಳು (29 X3) (1, 2 ಮತ್ತು 3ನೇ ಬಹುಮಾನಗಳು) | 87 | 3/2/1 | 174.00 |
| 3 | ವಿಭಾಗ ಮಟ್ಟದ 3 ಅತ್ಯುತ್ತಮ ಸ್ವಚ್ಛ ಗ್ರಾಮ ಪಂಚಾಯತಿಗಳು (4 X3) (1, 2 ಮತ್ತು 3ನೇ ಬಹುಮಾನಗಳು) | 12 | 5/4/3 | 48.00 |
| 4 | ರಾಜ್ಯ ಮಟ್ಟದ 3 ಅತ್ಯುತ್ತಮ ಸ್ವಚ್ಛ ಗ್ರಾಮ ಪಂಚಾಯತಿಗಳು (1, 2 ಮತ್ತು 3) | 3 | 10/7/5 | 22.00 |
| 5 | ವಿಭಾಗ ಮಟ್ಟದ 1 ಅತ್ಯುತ್ತಮ ಸ್ವಚ್ಛ ತಾಲೂಕು ಪಂಚಾಯಿತಿ (4 ತಾಲೂಕುಗಳು) | 4 | 10 | 40.00 |
| 6 | ರಾಜ್ಯ ಮಟ್ಟದ 1 ಅತ್ಯುತ್ತಮ ಸ್ವಚ್ಛ ತಾಲ್ಲೂಕು ಪಂಚಾಯತಿ | 1 | 20 | 20.00 |
| 7 | ರಾಜ್ಯ ಮಟ್ಟದ 1 ಅತ್ಯುತ್ತಮ ಸ್ವಚ್ಛ ಜಿಲ್ಲೆ | 1 | 30 | 30.00 |
| 8 | ತಾಲ್ಲೂಕು ಮಟ್ಟದ ಅತ್ಯುತ್ತಮ ಸ್ವಚ್ಛ ಶಾಲೆ | 176 | 0.20 | 35.20 |
| 9 | ತಾಲ್ಲೂಕು ಮಟ್ಟದ ಅತ್ಯುತ್ತಮ ಸ್ವಚ್ಛ ಅಂಗನವಾಡಿ | 176 | 0.10 | 17.60 |
| 10 | ಜಿಲ್ಲಾ ಮಟ್ಟದ ಅತ್ಯುತ್ತಮ ಸ್ವಚ್ಛ ಶಾಲೆ | 29 | 0.30 | 8.70 |
| 11 | ಜಿಲ್ಲಾ ಮಟ್ಟದ ಅತ್ಯುತ್ತಮ ಸ್ವಚ್ಛ ಅಂಗನವಾಡಿ | 29 | 0.15 | 4.35 |
| 12 | ಚಾಲನೆ/ಆಂದೋಲನ/ಮೌಲ್ಯಮಾಪನ/ಇತರೆ | | | 424.15 |
| 13 | ತ್ವರಿತಗತಿ ಸಾಧನೆಗಾಗಿ ಜಿಲ್ಲಾ ಪಂಚಾಯತ್ ವತಿಯಿಂದ ನೀಡಲಾಗುವ ಪ್ರಶಸ್ತಿಗಾಗಿ ಕಾಯ್ದಿರಿಸಿದ ಮೊತ್ತ (ಪ್ರತಿ ತಾಲ್ಲೂಕಿಗೆ 4 ಗ್ರಾಮಗಳು– ತಲಾ 25,000 ರೂ.ನಂತೆ) | | | |
| | ಒಟ್ಟು | 724 | | 1000.00 |

**ಮೌಲ್ಯ ಮಾಪನ:** ಸ್ಪರ್ಧೆಯಲ್ಲಿ ಭಾಗವಹಿಸಿದ ಪಂಚಾಯತ್ ಸಂಸ್ಥೆಗಳಲ್ಲಿನ ಸ್ವಚ್ಛತೆಯ ಸಾಧನೆಯನ್ನು ಮೌಲ್ಯ ಮಾಪನದ ಮೂಲಕ ನಿರ್ಧರಿಸಲಾಗುವುದು. ಇದಕ್ಕಾಗಿ ತಾಲೂಕು, ಜಿಲ್ಲೆ, ವಿಭಾಗ ಹಾಗೂ ರಾಜ್ಯ ಮಟ್ಟಗಳಲ್ಲಿ ಮೌಲ್ಯಮಾಪನ ಸಮಿತಿಗಳನ್ನು ರಚಿಸಲಾಗುವುದು. ಮೌಲ್ಯ ಮಾಪನ ಸಮಿತಿಯು ಸರ್ಕಾರಿ ಅಧಿಕಾರಿಗಳು, ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು, ಮಾಧ್ಯಮ ಸಂಸ್ಥೆಗಳು ಹಾಗೂ ಸಾಮಾಜಿಕ ಸಂಘಟನೆಗಳ ಪ್ರತಿನಿಧಿಗಳನ್ನು ಒಳಗೊಂಡಿರುತ್ತದೆ. ವಿವಿಧ ಹಂತಗಳ ಮೌಲ್ಯ ಮಾಪನ ಸಮಿತಿಗಳು ಈ ಕೆಳಕಂಡಂತಿರುತ್ತವೆ–



ಬಿ) ತಾಲ್ಲೂಕು ಹಂತ:

i. ಕಾರ್ಯನಿರ್ವಾಹಕ ಅಧಿಕಾರಿಗಳು – ತಾಲ್ಲೂಕು ಪಂಚಾಯಿತಿಗಳು (ತಂಡದ ಮುಖ್ಯಸ್ಥರು)
ii. ಶಿಶು ಅಭಿವೃದ್ಧಿ ಕಾರ್ಯಕ್ರಮ ಅಧಿಕಾರಿಗಳು, ತಾಲ್ಲೂಕಿನ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ (ಸದಸ್ಯರು)
iii. ತಾಲ್ಲೂಕಿನ ಸಮಾಜ ಕಲ್ಯಾಣ ಇಲಾಖಾ ಅಧಿಕಾರಿಗಳು (ಸದಸ್ಯರು)
iv. ಕ್ಷೇತ್ರಶಿಕ್ಷಣ ಅಧಿಕಾರಿಗಳು (ಸದಸ್ಯರು)
v. ಸ್ವಚ್ಛತಾ ಕಾರ್ಯಕ್ರಮಗಳಲ್ಲಿ ಹೆಚ್ಚಿಗೆ ತೊಡಗಿಸಿಕೊಂಡಿರುವ ಮಹಿಳಾ ಸಂಘ ಅಥವಾ ಸರ್ಕಾರೇತರ ಸಂಸ್ಥೆಗಳು ಅಥವಾ ಸಮುದಾಯ ಆಧಾರಿತ ಸಂಸ್ಥೆಗಳ ಪ್ರತಿನಿಧಿಗಳು (ಸದಸ್ಯರು)
vi. ತಾಲ್ಲೂಕಿನ ಆರೋಗ್ಯಾಧಿಕಾರಿಗಳು, ಆರೋಗ್ಯ ಇಲಾಖೆ (ಸದಸ್ಯರು)

ಸಿ) ಜಿಲ್ಲಾ ಹಂತ:

i. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತ್ (ತಂಡದ ಮುಖ್ಯಸ್ಥರು)
ii. ಕಾರ್ಯನಿರ್ವಾಹಕ ಅಭಿಯಂತರರು, ಜಿಲ್ಲಾ ಪಂಚಾಯತ್ (ಸದಸ್ಯರು)
iii. ಜಿಲ್ಲಾ ಆರೋಗ್ಯಾಧಿಕಾರಿಗಳು, ಆರೋಗ್ಯ ಇಲಾಖೆ (ಸದಸ್ಯರು)
iv. ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ (ಸದಸ್ಯರು)
v. ಜಿಲ್ಲಾ ಸಮಾಜ ಕಲ್ಯಾಣ ಇಲಾಖಾ ಅಧಿಕಾರಿಗಳು (ಸದಸ್ಯರು)
vi. ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ (ಸದಸ್ಯರು)
vii. ಸ್ವಚ್ಛತಾ ಕಾರ್ಯಕ್ರಮಗಳಲ್ಲಿ ಹೆಚ್ಚಿಗೆ ತೊಡಗಿಸಿಕೊಂಡಿರುವ ಸರ್ಕಾರೇತರ ಸಂಸ್ಥೆಗಳು ಅಥವಾ ಸಮುದಾಯ ಆಧಾರಿತ ಸಂಸ್ಥೆಗಳ ಪ್ರತಿನಿಧಿಗಳು (ಸದಸ್ಯರು)
viii. ಪತ್ರಿಕಾ/ಮಾಧ್ಯಮ ಪ್ರತಿನಿಧಿಗಳು (1 ಅಥವಾ 2)

ಡಿ) ವಿಭಾಗ ಹಂತ

i. ವಿಭಾಗ ಆಯುಕ್ತರು (ತಂಡದ ಮುಖ್ಯಸ್ಥರು)
ii. ಶಿಕ್ಷಣ ಇಲಾಖೆಯ ವಿಭಾಗೀಯ ಮಟ್ಟದ ಅಧಿಕಾರಿಗಳು (ಸದಸ್ಯರು)
iii. ಆರೋಗ್ಯ ಇಲಾಖೆಯ ವಿಭಾಗೀಯ ಮಟ್ಟದ ಅಧಿಕಾರಿಗಳು (ಸದಸ್ಯರು)
iv. ಸ್ವಚ್ಛತಾ ಕಾರ್ಯಕ್ರಮಗಳಲ್ಲಿ ಹೆಚ್ಚಿಗೆ ತೊಡಗಿಸಿಕೊಂಡಿರುವ ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು (ಸದಸ್ಯರು)
v. ಮಾಧ್ಯಮ ಪ್ರತಿನಿಧಿಗಳು
vi. ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆಯ ಪ್ರತಿನಿಧಿಗಳು

ಈ) ರಾಜ್ಯ ಹಂತ

i. ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ (ಅಧ್ಯಕ್ಷರು)
ii. ನಿರ್ದೇಶಕರು, ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆ (ಸದಸ್ಯರು /ಸಂಚಾಲಕರು)
iii. ಶಿಕ್ಷಣ ಇಲಾಖೆ ಆಯುಕ್ತರು
iv. ಆರೋಗ್ಯ ಇಲಾಖೆ ಆಯುಕ್ತರು
v. ವಾರ್ತಾ ಮತ್ತು ಪ್ರಚಾರ ಇಲಾಖೆಯ ನಿರ್ದೇಶಕರು
vi. ಅಪರ ನಿರ್ದೇಶಕರು (ಎಂ.ಐ.ಎಸ್), ಕಗ್ರಾನೀಸನೈಸಂ
vii. ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು
viii. ಪತ್ರಿಕಾ/ಮಾಧ್ಯಮ ಪ್ರತಿನಿಧಿಗಳು

ಅತ್ಯುತ್ತಮ ತಾಲ್ಲೂಕು ಮತ್ತು ಅತ್ಯುತ್ತಮ ಜಿಲ್ಲೆಗಳನ್ನು ರಾಜ್ಯ ಮೌಲ್ಯ ಮಾಪನ ಸಮಿತಿಗಳಿಂದ ಮೌಲ್ಯಮಾಪನ ಮಾಡಿಸಲಾಗುವುದು.



ಸ್ವಚ್ಛತೆ ಎಲ್ಲಿದ್ಯೋ ಅಲ್ಲಿದೆ ಆರೋಗ್ಯ

## ಮೌಲ್ಯಮಾಪನದ ಮಾನದಂಡಗಳು:

### ನಮೂನೆ –I

### ಆಂದೋಲನದ ಅನುಷ್ಠಾನದಲ್ಲಿ ತೀವ್ರತೆ ಆಧಾರಿತ (Acceleration) ನೀಡುವ ಪ್ರಶಸ್ತಿಗೆ ಅನುಸರಿಸಬೇಕಾದ ಮೌಲ್ಯಮಾಪನ ಮಾನದಂಡಗಳು

| ಕ್ರ.ಸಂ | ವಿವರ | ಪರಿಶೀಲನಾ ವಿಧಾನ | ಅಂಕಗಳು |
|---|---|---|---|
| 1 | **ಸಮುದಾಯ ಭಾಗವಹಿಸುವಿಕೆ** | | 16 |
| | 1. ಕಾಲಕಾಲಕ್ಕೆ ಗ್ರಾಮಸಭೆ | ಗುಂಪು ಚರ್ಚೆ | 4 |
| | 2. ನೈರ್ಮಲ್ಯಕ್ಕೆ ಸಂಬಂಧಪಟ್ಟ ವಿಷಯ/ಸಮಸ್ಯೆಗಳನ್ನು ಸಮುದಾಯವೇ ಬಗೆಹರಿಸುವುದು. | ಗುಂಪು ಚರ್ಚೆ | 4 |
| | 3. ಸಮುದಾಯ ಆಧಾರಿತ ಸಂಘಸಂಸ್ಥೆಗಳ ಭಾಗವಹಿಸುವಿಕೆ (CBOs) | ಗುಂಪು ಚರ್ಚೆ | 4 |
| | 4. ಸ್ವಚ್ಛತಾ ಕಾರ್ಯಕ್ರಮಗಳನ್ನು ತೀವ್ರಗೊಳಿಸಲು ಸಮುದಾಯದ ನೇತೃತ್ವದಲ್ಲಿ ಶಿಸ್ತಿನ ಕ್ರಮ ಕೈಗೊಳ್ಳುವುದು (ದಂಡ, ಮನವೊಲಿಸುವುದು) | ಗುಂಪು ಚರ್ಚೆ | 4 |
| 2 | **ಪಂಚಾಯತ್ ರಾಜ್ ಸಂಸ್ಥೆಗಳ ಭಾಗವಹಿಸುವಿಕೆ** | | 10 |
| | 1. ನೈರ್ಮಲ್ಯಕ್ಕೆ ಸಂಬಂಧಿಸಿದ ನಿರ್ಮಾಣ, ನಿರ್ವಹಣೆ, ಸಾಮಾಜಿಕ ವ್ಯಾಜ್ಯಗಳ ಬಗೆಹರಿಸುವಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಭಾಗವಹಿಸುವಿಕೆ | ಗುಂಪು ಚರ್ಚೆ | 5 |
| | 2. ಸಂಪನ್ಮೂಲ ಕ್ರೋಢೀಕರಣ(ಮಾನವ ಸಂಪನ್ಮೂಲ/ಆರ್ಥಿಕ ನೆರವು ಇತ್ಯಾದಿ) | ದಾಖಲೆ | 5 |
| 3 | **ಬಯಲು ಮಲ ವಿಸರ್ಜನೆ ಮುಕ್ತ ಸ್ಥಿತಿ** | | 23 |
| | 1. ವೈಯಕ್ತಿಕ ಶೌಚಾಲಯಗಳ ನಿರ್ಮಾಣ | ಶೇ.10 ರಷ್ಟು ಮನೆ ಭೇಟಿ | 12 |
| | 2.ವೈಯಕ್ತಿಕ ಶೌಚಾಲಯಗಳ ಸಮರ್ಪಕ ಬಳಕೆ | ಶೇ.10 ರಷ್ಟು ಮನೆ ಭೇಟಿ | 8 |
| | 3. ವೈಯಕ್ತಿಕ ಶೌಚಾಲಯಗಳ ಸೂಕ್ತ ನಿರ್ವಹಣೆ | ಶೇ.10 ರಷ್ಟು ಮನೆ ಭೇಟಿ | 3 |
| | **ಮಾಹಿತಿ, ಶಿಕ್ಷಣ ಮತ್ತು ಸಂವಹನ ಕಾರ್ಯಕ್ರಮಗಳು**<br>ನೈರ್ಮಲ್ಯಕ್ಕೆ ಸಂಬಂಧಿಸಿದ ಕಾಮಗಾರಿಗಳನ್ನು ತ್ವರಿತಗೊಳಿಸಲು ಅಳವಡಿಸಿದ ತಂತ್ರಗಳು | | 16 |
| | 1. ಗೋಡೆಬರಹ | ಸಾಮಾನ್ಯ ವೀಕ್ಷಣೆ | 2 |
| | 2. ಜಾಥಾ | ಗುಂಪು ಚರ್ಚೆ | 2 |

| | | | |
|---|---|---|---|
| 4 | 3. ವೀಡಿಯೋ, ಬೀದಿ ನಾಟಕ | ಗುಂಪು ಚರ್ಚೆ | 2 |
| | 4. ಪಿ.ಆರ್.ಎ | ಗುಂಪು ಚರ್ಚೆ | 2 |
| | 5. ಭಿತ್ತಿ ಪತ್ರ, ಪೋಸ್ಟರ್‌ಗಳು | ಸಾಮಾನ್ಯ ವೀಕ್ಷಣೆ | 2 |
| | 6. ಗ್ರಾಮ ಸಭೆ | ಗುಂಪು ಚರ್ಚೆ, ದಾಖಲಾತಿ | 2 |
| | 7. ಮನೆ ಮನೆ ಭೇಟಿ | ಗುಂಪು ಚರ್ಚೆ | 2 |
| | 8. ಭಿತ್ತಿ ಫಲಕಗಳು | ಸಾಮಾನ್ಯ ವೀಕ್ಷಣೆ | 2 |
| 5 | ಸೂಕ್ತ ನೀರು ಸರಬರಾಜಿನ ವ್ಯವಸ್ಥೆ | | 10 |
| | 1. ಪ್ರತಿ ಮನೆಗೂ ಅವಶ್ಯಕತೆಗನುಗುಣವಾಗಿ ನೀರಿನ ವ್ಯವಸ್ಥೆ | ಗುಂಪು ಚರ್ಚೆ | 2 |
| | 2. ಶಾಲೆ, ಅಂಗನವಾಡಿ ಮತ್ತು ಸಮುದಾಯ ಶೌಚಾಲಯಗಳಿಗೆ ಸೂಕ್ತ ನೀರಿನ ವ್ಯವಸ್ಥೆ | ಖುದ್ದು ಭೇಟಿ | 2 |
| | 3. ಕಾಲ ಕಾಲಕ್ಕೆ ಕುಡಿಯುವ ನೀರಿನ ಗುಣಮಟ್ಟ ಪರೀಕ್ಷೆ | ದಾಖಲಾತಿ | 2 |
| | 4. ಮಳೆ ನೀರು ಸಂಗ್ರಹಣೆ, ಬಳಕೆ ಹಾಗೂ ಸೂಕ್ತ ನಿರ್ವಹಣೆ | ಖುದ್ದು ಭೇಟಿ | 2 |
| | 5. ಕುಡಿಯುವ ನೀರಿನ ಮೂಲಗಳ ಸುತ್ತ ಮುತ್ತ ನೈರ್ಮಲ್ಯ ಕಾಪಾಡಲಾಗಿದೆ | ಖುದ್ದು ಭೇಟಿ | 2 |
| 6 | ಘನ ಮತ್ತು ದ್ರವ ತ್ಯಾಜ್ಯಗಳ ವಿಲೇವಾರಿ | | 25 |
| | 1. ಮನೆ ಹಂತದಲ್ಲಿ ಕಸವನ್ನು ಸೂಕ್ತ ರೀತಿಯಲ್ಲಿ ವಿಲೇವಾರಿ/ನಿರ್ವಹಣೆ | ಶೇ.10 ರಷ್ಟು ಮನೆ ಭೇಟಿ | 5 |
| | 2. ಗ್ರಾಮ ಹಂತದಲ್ಲಿ ಕಸವನ್ನು ಸೂಕ್ತ ರೀತಿಯಲ್ಲಿ ವಿಲೇವಾರಿ/ನಿರ್ವಹಣೆ/ ಸ್ಥಳೀಯ ಸಂಪನ್ಮೂಲಗಳ ಬಳಕೆ | ಗ್ರಾ.ಪಂ.ನಿಂದ ಹೂಡಿದ ಪದ್ಧತಿ ಪರಿಶೀಲನೆ | 6 |
| | 3. ಅಡುಗೆ ಮನೆ ಮತ್ತು ಸ್ನಾನದ ನೀರಿನ ಸೂಕ್ತ ವಿಲೇವಾರಿ/ನಿರ್ವಹಣೆ | ಸಾಮಾನ್ಯ ವೀಕ್ಷಣೆ | 4 |
| | 4. ಚರಂಡಿ ನಿರ್ವಹಣೆ/ಇಂಗು ಗುಂಡಿ ನಿರ್ಮಾಣ | ಸಾಮಾನ್ಯ ವೀಕ್ಷಣೆ | 5 |
| | 5. ಸಮುದಾಯ ಆಧಾರಿತ ತ್ಯಾಜ್ಯ ವಸ್ತುಗಳ(ಘನ ಮತ್ತು ದ್ರವ) ನಿರ್ವಹಣೆ(ವೈಜ್ಞಾನಿಕವಾಗಿ ತ್ಯಾಜ್ಯ ನೀರು ಸಂಗ್ರಹಣೆ ಮತ್ತು ನಿರ್ವಹಣೆ/ತ್ಯಾಜ್ಯದಿಂದ ಎರೆಹುಳು ಗೊಬ್ಬರ/ಗೊಬ್ಬರ ತಯಾರಿಕೆ ಮುಂತಾದವುಗಳು) | ತ್ಯಾಜ್ಯ ವಸ್ತುಗಳ ನಿರ್ವಹಣೆ/ ಸೂಕ್ತ ವಿಲೇವಾರಿ (ವೈಜ್ಞಾನಿಕವಾಗಿ) ನಡೆಸುವ ಸ್ಥಳ ಪರಿಶೀಲನೆ | 5 |
| | ಒಟ್ಟು ಅಂಕಗಳು | | 100 |

## ನಮೂನೆ – II

## ಸುಸ್ಥಿರತೆ (Sustainability) ಆಧಾರದ ಪ್ರಶಸ್ತಿಗೆ ಅನುಸರಿಸಬೇಕಾದ ಮೌಲ್ಯಮಾಪನ ಮಾನದಂಡ

| ಕ್ರ.ಸಂ | ವಿವರ | ಪರಿಶೀಲನಾ ವಿಧಾನ | ಅಂಕಗಳು |
|---|---|---|---|
| 1 | **ಬಯಲು ಮಲವಿಸರ್ಜನೆ ಮುಕ್ತ ಗ್ರಾಮ ಪಂಚಾಯತಿ** | | **20** |
| | 1. ಪ್ರಶಸ್ತಿ ಪಡೆದ ನಂತರ ಹೊಸದಾಗಿ ನಿರ್ಮಾಣಗೊಂಡ ಮನೆಗಳಲ್ಲಿ/ ವಿವಿಧ ಯೋಜನೆಗಳಲ್ಲಿ ಶೌಚಾಲಯ ನಿರ್ಮಾಣ ಮಾಡಲಾಗಿದೆಯೇ? | ಶೇ.100 ರಷ್ಟು ಮನೆ ಭೇಟಿ | 2 |
| | 2. ಈಗಾಗಲೇ ನಿರ್ಮಿಸಲಾಗಿರುವ ಶೌಚಾಲಯಗಳನ್ನು ನಿಗದಿಪಡಿಸಿದ ಉದ್ದೇಶಕ್ಕಾಗಿ ಬಳಸುತ್ತಿರುವುದು | ಶೇ.10 ರಷ್ಟು ಮನೆ ಭೇಟಿ | 2 |
| | 3. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬಯಲು ಮಲವಿಸರ್ಜನೆಯನ್ನು ಸಂಪೂರ್ಣವಾಗಿ ಮುಕ್ತಗೊಳಿಸಲಾಗಿದೆ. | ಮಲವಿಸರ್ಜನಾ ತಾಣಗಳಿಗೆ ಭೇಟಿ | 5 |
| | 4. ಗ್ರಾ.ಪಂ.ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶಾಲೆ ಮತ್ತು ಅಂಗನವಾಡಿ ಶೌಚಾಲಯಗಳನ್ನು ಬಳಸುತ್ತಿರುವುದು ಹಾಗೂ ಸೂಕ್ತ ನಿರ್ವಹಣೆ | ಖುದ್ದು ಭೇಟಿ | 5 |
| | 5. ಸಮುದಾಯ ಶೌಚಾಲಯ ನಿರ್ಮಾಣವಾಗಿದ್ದಲ್ಲಿ ಸೂಕ್ತ ರೀತಿಯಲ್ಲಿ ಬಳಕೆ ಮತ್ತು ನಿರ್ವಹಣೆ | ಖುದ್ದು ಭೇಟಿ | 4 |
| | 6. ಬಯಲು ಮಲ ವಿಸರ್ಜನೆ ಸ್ಥಳಗಳನ್ನು ಸುಂದರ ತಾಣಗಳನ್ನಾಗಿ ನಿರ್ಮಾಣ ಮಾಡುವುದು(ಉದ್ಯಾನ ವನ, ಕ್ರೀಡಾಂಗಣ ಮುಂತಾದವು) | ಖುದ್ದು ಭೇಟಿ | 2 |
| 2 | **ಘನ ಮತ್ತು ದ್ರವ ತ್ಯಾಜ್ಯಗಳ ವಿಲೇವಾರಿ** | | **40** |
| | 1. ಮನೆ ಹಂತದಲ್ಲಿ ಕಸವನ್ನು ಸೂಕ್ತ ರೀತಿಯಲ್ಲಿ ವಿಲೇವಾರಿ/ನಿರ್ವಹಣೆ | ಶೇ.10 ರಷ್ಟು ಮನೆ ಭೇಟಿ | 10 |
| | 2. ಗ್ರಾಮ ಹಂತದಲ್ಲಿ ಕಸವನ್ನು ಸೂಕ್ತ ರೀತಿಯಲ್ಲಿ ವಿಲೇವಾರಿ/ನಿರ್ವಹಣೆ/ ಸ್ಥಳೀಯ ಸಂಪನ್ಮೂಲಗಳ ಬಳಕೆ | ಗ್ರಾ.ಪಂ.ನಿಗದಿ ಪಡಿಸಿದ ಪದ್ಧತಿ ಪರಿಶೀಲನೆ | 10 |
| | 3. ಅಡುಗೆ ಮನೆ ಮತ್ತು ಸ್ನಾನದ ನೀರಿನ ಸೂಕ್ತ ವಿಲೇವಾರಿ/ನಿರ್ವಹಣೆ | ಸಾಮಾನ್ಯ ವೀಕ್ಷಣೆ | 10 |
| | 4. ಚರಂಡಿ ನಿರ್ವಹಣೆ/ಇಂಗು ಗುಂಡಿ ನಿರ್ಮಾಣ | ಸಾಮಾನ್ಯ ವೀಕ್ಷಣೆ | 5 |
| | 5. ಸಮುದಾಯ ಆಧಾರಿತ ತ್ಯಾಜ್ಯ ವಸ್ತುಗಳ(ಘನ ಮತ್ತು ದ್ರವ) ನಿರ್ವಹಣೆ(ವೈಜ್ಞಾನಿಕವಾಗಿ ತ್ಯಾಜ್ಯ ನೀರು ಸಂಗ್ರಹಣೆ ಮತ್ತು ನಿರ್ವಹಣೆ/ತ್ಯಾಜ್ಯದಿಂದ ಎರೆಹುಳು ಗೊಬ್ಬರ/ಗೊಬ್ಬರ ತಯಾರಿಕೆ ಮುಂತಾದವುಗಳು) | ತ್ಯಾಜ್ಯ ವಸ್ತುಗಳ ನಿರ್ವಹಣೆ/ ಸೂಕ್ತ ವಿಲೇವಾರಿ(ವೈಜ್ಞಾನಿಕ) ನಡೆಸುವ ಸ್ಥಳ ಪರಿಶೀಲನೆ | 5 |
| 3 | **ಸಮುದಾಯ ಭಾಗವಹಿಸುವಿಕೆ** | | **10** |
| | 1. ನೈರ್ಮಲ್ಯ ಕಾಪಾಡುವಲ್ಲಿ ಸಮುದಾಯ ನೇತೃತ್ವದಲ್ಲಿ ನಿರಂತರವಾಗಿ ಶಿಸ್ತಿನ ಕ್ರಮ ಕೈಗೊಳ್ಳುವುದು(ದಂಡ, ಮನವೊಲಿಸುವುದು) | ಗುಂಪು ಚರ್ಚೆ | 10 |
| 4 | **ಸೂಕ್ತ ನೀರು ಸರಬರಾಜಿನ ವ್ಯವಸ್ಥೆ** | | **20** |
| | 1. ಪ್ರತಿ ಮನೆಗೂ ಅವಶ್ಯಕತೆಗನುಗುಣವಾಗಿ ನೀರಿನ ವ್ಯವಸ್ಥೆ | ಗುಂಪು ಚರ್ಚೆ | 3 |
| | 2. ಶಾಲೆ, ಅಂಗನವಾಡಿ ಮತ್ತು ಸಮುದಾಯ ಶೌಚಾಲಯಗಳಿಗೆ ಸೂಕ್ತ ನೀರಿನ ವ್ಯವಸ್ಥೆ | ಖುದ್ದು ಭೇಟಿ | 5 |

| | | | |
|---|---|---|---|
| | 3. ಕಾಲ ಕಾಲಕ್ಕೆ ಕುಡಿಯುವ ನೀರಿನ ಗುಣಮಟ್ಟ ಪರೀಕ್ಷೆ | ದಾಖಲಾತಿಗಳ ಪರಿಶೀಲನೆ | 5 |
| | 4. ಮಳೆ ನೀರು ಸಂಗ್ರಹಣೆ, ಬಳಕೆ ಹಾಗೂ ಸೂಕ್ತ ನಿರ್ವಹಣೆ | ಖುದ್ದು ಭೇಟಿ | 3 |
| | 5. ಕುಡಿಯುವ ನೀರಿನ ಮೂಲಗಳ ಸುತ್ತ ಮುತ್ತ ನೈರ್ಮಲ್ಯ ಕಾಪಾಡಲಾಗಿದೆ | ಖುದ್ದು ಭೇಟಿ | 4 |
| 5 | ಪರಿಸರ ಮಾಲಿನ್ಯ ತಡೆಗಟ್ಟುವಿಕೆ | | 10 |
| | 1. ಗಿಡ ನೆಡುವಿಕೆ | ಸಾಮಾನ್ಯ ವೀಕ್ಷಣೆ | 2 |
| | 2. ಜೈವಿಕ ಅನಿಲ ತಯಾರಿಕ ಘಟಕ | ಖುದ್ದು ಭೇಟಿ | 2 |
| | 3. ನೈರ್ಮಲ್ಯ ಕಾಪಾಡುವಲ್ಲಿ ವಿಶಿಷ್ಟ (Innovative) ಅಂಶಗಳನ್ನು ಅಳವಡಿಸಿದ್ದಲ್ಲಿ | ಖುದ್ದು ಭೇಟಿ | 6 |
| | ಒಟ್ಟು ಅಂಕಗಳು | | 100 |

## ನಮೂನೆ - III
## ಅತ್ಯುತ್ತಮ ಶಾಲಾ ಪ್ರಶಸ್ತಿಗೆ ಅನುಸರಿಸಬೇಕಾದ ಮೌಲ್ಯಮಾಪನದ ಮಾನದಂಡಗಳು

| ಕ್ರ.ಸಂ | ವಿವರ | ಪರಿಶೀಲನಾ ವಿಧಾನ | ಅಂಕಗಳು |
|---|---|---|---|
| 1 | ಶಾಲಾ ಶೌಚಾಲಯ | | 30 |
| | 1. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶಾಲಾ ಶೌಚಾಲಯಗಳು ಮಕ್ಕಳ ಸಂಖ್ಯೆಗನುಗುಣವಾಗಿ ಹಾಗು ಬಾಲಕ, ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯಗಳ ನಿರ್ಮಾಣವಾಗಿದೆಯೇ | ಖುದ್ದು ಭೇಟಿ ಮತ್ತು ಪರಿಶೀಲನೆ | 6 |
| | 2. ಶೌಚಾಲಯ ಕಟ್ಟಡದ ಗುಣಮಟ್ಟ | ಖುದ್ದು ಭೇಟಿ ಮತ್ತು ಪರಿಶೀಲನೆ | 6 |
| | 3. ಶೌಚಾಲಯ ಬಳಸಲು ಸೂಕ್ತ ಸ್ಥಳದಲ್ಲಿದೆಯೇ | ಖುದ್ದು ಭೇಟಿ ಮತ್ತು ಪರಿಶೀಲನೆ | 6 |
| | 4. ಎಲ್ಲಾ ಮಕ್ಕಳಿಂದ ಸರಿಯಾಗಿ ಬಳಕೆಯಾಗುತ್ತಿದೆಯೇ | ಖುದ್ದು ಭೇಟಿ ಮತ್ತು ಪರಿಶೀಲನೆ | 6 |
| | 5. ಶೌಚಾಲಯಗಳ ಸರಿಯಾದ ಹಾಗೂ ಸೂಕ್ತ ನಿರ್ವಹಣೆ | ಖುದ್ದು ಭೇಟಿ ಮತ್ತು ಪರಿಶೀಲನೆ | 6 |
| 2 | ಮಕ್ಕಳಲ್ಲಿ ನೈರ್ಮಲ್ಯದ ಬಗ್ಗೆ ತಿಳುವಳಿಕೆ | | 10 |
| | 1. ವೈಯಕ್ತಿಕ ಶುಚಿತ್ವ | ಖುದ್ದು ಭೇಟಿ ಮತ್ತು ಪರಿಶೀಲನೆ | 5 |
| | 2. ಶೌಚಾಲಯಗಳ ಬಳಕೆ ಬಗ್ಗೆ ಮಕ್ಕಳಿಂದ ಮಾಹಿತಿ | ಖುದ್ದು ಭೇಟಿ ಮತ್ತು ಪರಿಶೀಲನೆ | 5 |

| | | | |
|---|---|---|---|
| | ಶಾಲಾ ಮಂತ್ರಿ ಮಂಡಲ | | 10 |
| 3 | 1. ರಚನೆ | ಖುದ್ದು ಭೇಟಿ ಮತ್ತು ದಾಖಲಾತಿ | 5 |
| | 2. ಕಾರ್ಯನಿರ್ವಹಣೆ | ಖುದ್ದು ಭೇಟಿ ಮತ್ತು ದಾಖಲಾತಿ | 5 |
| | ಶಾಲಾ ನೈರ್ಮಲ್ಯ | | 15 |
| | 1. ನೀರಿನ ಸೌಕರ್ಯ | ಖುದ್ದು ಭೇಟಿ ಮತ್ತು ಪರಿಶೀಲನೆ | 4 |
| 4 | 2. ನೀರಿನ ಮೂಲಗಳ ಶುಚಿತ್ವ | ಖುದ್ದು ಭೇಟಿ ಮತ್ತು ಪರಿಶೀಲನೆ | 4 |
| | 3. ಕುಡಿಯುವ ನೀರಿನ ಗುಣಮಟ್ಟ ತಪಾಸಣೆ (H2S vials) | ಖುದ್ದು ಭೇಟಿ ಮತ್ತು ತಪಾಸಣೆ | 4 |
| | 4. ಮಧ್ಯಾಹ್ನದ ಊಟದ ಶುಚಿತ್ವ | ಖುದ್ದು ಭೇಟಿ ಮತ್ತು ಪರಿಶೀಲನೆ | 3 |
| | ಶಾಲಾ ಅಭಿವೃದ್ಧಿ ಮತ್ತು ಉಸ್ತುವಾರಿ ಸಮಿತಿ | | 5 |
| 5 | 1. ಕಾರ್ಯನಿರ್ವಹಣೆ | ಖುದ್ದು ಭೇಟಿ ಮತ್ತು ದಾಖಲಾತಿ ಪರಿಶೀಲನೆ | 5 |
| | ಶಾಲಾ ಆವರಣ ಸುಂದರೀಕರಣ ಮತ್ತು ಸ್ವಚ್ಛತೆ | | 15 |
| | 1. ಉದ್ಯಾನವನ, ಗಿಡಮರಗಳು ಮತ್ತು ಆಟದ ಮೈದಾನ | ಖುದ್ದು ಭೇಟಿ ಮತ್ತು ಪರಿಶೀಲನೆ | 5 |
| 6 | 2. ಘನ ಹಾಗು ದ್ರವ ತ್ಯಾಜ್ಯ ವಸ್ತುಗಳ ವಿಲೇವಾರಿ ಮತ್ತು ನಿರ್ವಹಣೆ | ಖುದ್ದು ಭೇಟಿ ಮತ್ತು ಪರಿಶೀಲನೆ | 5 |
| | 3. ಶಾಲೆಯ ಅಭಿವೃದ್ಧಿಯಲ್ಲಿ ಇಡೀ ಸಮುದಾಯದ ಪಾಲ್ಗೊಳ್ಳುವಿಕೆ, ಸಮುದಾಯದ ಮೇಲೆ ಶಾಲೆಯ ಪ್ರಭಾವ | ಸಮುದಾಯ ಹಾಗು ವಿದ್ಯಾರ್ಥಿಗಳೊಂದಿಗೆ ಚರ್ಚೆ | 5 |
| 7 | ಮಳೆ ನೀರು ಸಂಗ್ರಹಣೆ | | 15 |
| | 1. ಮಳೆ ನೀರು ಕೊಯ್ಲು ಸಂಗ್ರಹಣಾ ತೊಟ್ಟಿ ನಿರ್ಮಾಣ, ಪೈಪ್‌ಲೈನ್, ಫಿಲ್ಟರ್ ಅಳವಡಿಕೆ ಇತ್ಯಾದಿ | ಖುದ್ದು ಭೇಟಿ ಮತ್ತು ಪರಿಶೀಲನೆ | 4 |
| | 2. ನೀರಿನ ಬಳಕೆ | ಖುದ್ದು ಭೇಟಿ ಮತ್ತು ಪರಿಶೀಲನೆ | 3 |
| | 3. ನಿರ್ವಹಣೆ | ಖುದ್ದು ಭೇಟಿ ಮತ್ತು ಪರಿಶೀಲನೆ | 3 |
| 8 | ವಿಶಿಷ್ಟ ಯೋಜನೆ/ಪದ್ಧತಿ ಜಾರಿಗೊಳಿಸುವಿಕೆ | ಖುದ್ದು ಭೇಟಿ ಮತ್ತು ಪರಿಶೀಲನೆ | 5 |
| | ಒಟ್ಟು ಅಂಕಗಳು | | 100 |

## ನಮೂನೆ - IV

### ಅತ್ಯುತ್ತಮ ಅಂಗನವಾಡಿ ಪ್ರಶಸ್ತಿಗೆ ಅನುಸರಿಸಬೇಕಾದ ಮೌಲ್ಯಮಾಪನದ ಮಾನದಂಡಗಳು

| ಕ್ರಸಂ | ವಿವರ | ಪರಿಶೀಲನಾ ವಿಧಾನ | ಅಂಕಗಳು |
|---|---|---|---|
| 1 | ಅಂಗನವಾಡಿ ಶೌಚಾಲಯ | | 50 |
| | 1. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಅಂಗನವಾಡಿ ಶೌಚಾಲಯಗಳ ನಿರ್ಮಾಣದ ಪರಿಶೀಲನೆ | ಶೇ.100 ಕ್ಕೆ 100 ರಷ್ಟು ಖುದ್ದು ಭೇಟಿ | 10 |
| | 2. ಶೌಚಾಲಯ ಕಟ್ಟಡದ ಗುಣಮಟ್ಟ | ಖುದ್ದು ಭೇಟಿ | 10 |
| | 3. ಬೇಬಿ ಪ್ಯಾನ್ ಮತ್ತು ಸುಂದರ ಚಿತ್ರಗಳ ಅಳವಡಿಕೆ | ಖುದ್ದು ಭೇಟಿ | 10 |
| | 4. ಚಿಕ್ಕ ಮಕ್ಕಳ ಬಳಕೆಗೆ ಸಹಾಯಕವಾಗುವಂತೆ ಕೇಂದ್ರದ ಒಳಗಡೆ/ತುಂಬಾ ಹತ್ತಿರದಲ್ಲಿ ನಿರ್ಮಾಣವಾಗಿದೆಯೇ | ಖುದ್ದು ಭೇಟಿ | 10 |
| | 5. ಶೌಚಾಲಯಗಳ ಸೂಕ್ತ ನಿರ್ವಹಣೆ ಆಗುತ್ತಿದೆಯೇ | ಖುದ್ದು ಭೇಟಿ | 10 |
| 2 | ಮಕ್ಕಳಲ್ಲಿ ನೈರ್ಮಲ್ಯದ ಬಗ್ಗೆ ತಿಳುವಳಿಕೆ | | 20 |
| | 1. ವೈಯಕ್ತಿಕ ಶುಚಿತ್ವ | ಖುದ್ದು ಭೇಟಿ ಮತ್ತು ಪರಿಶೀಲನೆ | 10 |
| | 2. ಶೌಚಾಲಯಗಳ ಬಳಕೆ ಬಗ್ಗೆ ಮಕ್ಕಳಿಂದ ಮಾಹಿತಿ | ಖುದ್ದು ಭೇಟಿ ಮತ್ತು ಪರಿಶೀಲನೆ | 10 |
| 3 | ಅಂಗನವಾಡಿ ನೈರ್ಮಲ್ಯ | | 25 |
| | 1. ನೀರಿನ ಸೌಕರ್ಯ | ಖುದ್ದು ಭೇಟಿ ಮತ್ತು ಪರಿಶೀಲನೆ | 8 |
| | 2. ನೀರಿನ ಮೂಲಗಳ ಶುಚಿತ್ವ ಕುಡಿಯುವ ನೀರಿನ ಗುಣಮಟ್ಟ ತಪಾಸಣೆ(ಹೆಚ್2ಎಸ್ ಕಿಟ್) | ಖುದ್ದು ಭೇಟಿ ಮತ್ತು ದಾಖಲಾತಿ ಪರಿಶೀಲನೆ | 9 |
| | 3. ಚಿಕ್ಕ ಮಕ್ಕಳ ಶುಚಿತ್ವದ ಊಟ ಹಾಗು ಪರಿಸರದ ಬಗ್ಗೆ ಪರಿಶೀಲನೆ. | ಖುದ್ದು ಭೇಟಿ ಮತ್ತು ಪರಿಶೀಲನೆ | 8 |
| 4 | ವಿಶಿಷ್ಟ ರೀತಿಯ ಯೋಜನೆ/ಪದ್ಧತಿ ಅಳವಡಿಕೆ | ಖುದ್ದು ಭೇಟಿ ಮತ್ತು ಪರಿಶೀಲನೆ | 5 |
| | ಒಟ್ಟು ಅಂಕಗಳು | | 100 |



## ರಾಜ್ಯ ಪ್ರಶಸ್ತಿ ಯೋಜನೆಯ ಜಾರಿ:

- ರಾಜ್ಯ ಪ್ರಶಸ್ತಿ ಯೋಜನೆಗೆ ಅಕ್ಟೋಬರ್ 2, 2009 ರ ಗಾಂಧಿ ಜಯಂತಿಯಂದು ಚಾಲನೆ ನೀಡಲಾಗಿದೆ.

- 2009-10ನೇ ಸಾಲಿನ ರಾಜ್ಯ ನೈರ್ಮಲ್ಯ ಪ್ರಶಸ್ತಿಗೆ ಎಲ್ಲಾ ಮಟ್ಟದಿಂದಲೂ ಅರ್ಜಿ ಸಲ್ಲಿಸಲು ಕಡೆಯ ದಿನಾಂಕ: 31-3-2010 ಆಗಿದ್ದು ಮುಂಬರುವ ವರ್ಷಗಳಲ್ಲಿ ನಿಗದಿತ ದಿನಾಂಕವನ್ನು ತಿಳಿಸಲಾಗುವುದು.

- ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಜೂನ್ ತಿಂಗಳ 5ನೇ ತಾರೀಖು ವಿಶ್ವ ಪರಿಸರ ದಿನದಂದು ನಡೆಸಲಾಗುತ್ತದೆ.

- ಸಹಿ -

ನಿರ್ದೇಶಕರು, ಗ್ರಾ.ನೀ.ಸ.ನೈ.ಇಂ ಹಾಗೂ
ಸರ್ಕಾರದ ಪದನಿಮಿತ್ತ ಅಪರ ಕಾರ್ಯದರ್ಶಿಗಳು
ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ನೈರ್ಮಲ್ಯ

## ಸ್ವಚ್ಛತೆಗೆ ಸನ್ಮಾನ

### ಸಂಪೂರ್ಣ ಸ್ವಚ್ಛತೆಯ ಸಾಧನೆಗೆ ನೀಡುವ ರಾಜ್ಯ ಪ್ರಶಸ್ತಿಯ ವಿವರಗಳು

**ನೈರ್ಮಲ್ಯ ರತ್ನ – ರಾಜ್ಯ ಮಟ್ಟ**

ಅತ್ಯುತ್ತಮ ಗ್ರಾಮ ಪಂಚಾಯತ್ – 10.7.5 ಲಕ್ಷ
ಅತ್ಯುತ್ತಮ ತಾಲ್ಲೂಕು ಪಂಚಾಯತ್ – 20 ಲಕ್ಷ
ಅತ್ಯುತ್ತಮ ಜಿಲ್ಲಾ ಪಂಚಾಯತ್ – 30 ಲಕ್ಷ
ಅತ್ಯುತ್ತಮ ವ್ಯಕ್ತಿ ಮತ್ತು ಸಂಸ್ಥೆಗಳಿಗೆ – ಪ್ರಶಸ್ತಿ ಪತ್ರ ಮತ್ತು ಫಲಕ

**ಸ್ವರ್ಣ ನೈರ್ಮಲ್ಯ – ವಿಭಾಗ ಮಟ್ಟ**

ಅತ್ಯುತ್ತಮ ಗ್ರಾಮ ಪಂಚಾಯತ್ – 5.4.3 ಲಕ್ಷ
ಅತ್ಯುತ್ತಮ ತಾಲ್ಲೂಕು ಪಂಚಾಯತ್ – 10 ಲಕ್ಷ

**ರಜತ ನೈರ್ಮಲ್ಯ – ಜಿಲ್ಲಾ ಮಟ್ಟ**

ಅತ್ಯುತ್ತಮ ಗ್ರಾಮ ಪಂಚಾಯತ್ – 3.2.1 ಲಕ್ಷ
ಅತ್ಯುತ್ತಮ ಶಾಲೆ – 30 ಸಾವಿರ
ಅತ್ಯುತ್ತಮ ಅಂಗನವಾಡಿ – 15 ಸಾವಿರ
ಅತ್ಯುತ್ತಮ ವ್ಯಕ್ತಿ ಮತ್ತು ಸಂಸ್ಥೆಗಳಿಗೆ – ಪ್ರಶಸ್ತಿ ಪತ್ರ ಮತ್ತು ಫಲಕ

**ನೈರ್ಮಲ್ಯ – ತಾಲ್ಲೂಕು ಮಟ್ಟ**

ಅತ್ಯುತ್ತಮ ಗ್ರಾಮಗಳು (4) – ತಲಾ 25 ಸಾವಿರ
ಅತ್ಯುತ್ತಮ ಗ್ರಾಮ ಪಂಚಾಯತ್ – 1 ಲಕ್ಷ
ಅತ್ಯುತ್ತಮ ಶಾಲೆ – 20 ಸಾವಿರ
ಅತ್ಯುತ್ತಮ ಅಂಗನವಾಡಿ – 10 ಸಾವಿರ




ಸಂಪೂರ್ಣ ಸ್ವಚ್ಛತಾ ಆಂದೋಲನ

ಸ್ವಾಭಿಮಾನಕ್ಕಾಗಿ ಸ್ವಚ್ಛತೆ

ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ